ಬಳ್ಳಾರಿ- ವಿಜಯನಗರ-ಕೊಪ್ಪಳ ಜಿಲ್ಲೆಗಳ ಆವೃತ್ತಿ

ಇಂಟರ್ ನೆಟ್ 'ಸಂಜೆವಾಣಿ' ನಂ.1ದ ವರ್ಲ್ಡ್ ಕಿಯೋಸ್

# ಸಂಜೆವಾಣಿ

1982

ಬಳ್ಳಾರಿ-ಬೆಂಗಳೂರು - ಹುಬ್ಬಳ್ಳಿ - ಕಲಬುರಗಿ - ಮೈಸೂರು - ಮಂಗಳೂರು - ದಾವಣಗೆರೆ - ತುಮಕೂರು - ರಾಯಚೂರು - ಶಿವಮೊಗ್ಗ - ವಿಜಯನಗರ

http://www.sanjevani.com

ಸಂಜೆವಾಣಿ ಜಾಹೀರಾತಿಗಾಗಿ ಸಂಪರ್ಕಿಸಿರಿ

ಸಮಸ್ತ ಜನತೆಯ ಹೆಮ್ಮೆಯ ಸಂಜೆ ದಿನಪತ್ರಿಕೆ
ಸಂಜೆವಾಣಿಯಲ್ಲಿ ಜಾಹೀರಾತು ನೀಡಲು ಕೂಡಲೇ ಸಂಪರ್ಕಿಸಿ.

ಸಂಜೆವಾಣಿ ದೈನಿಕ,ನಂ.2 ವಿಶ್ವೇಶ್ವರಯ್ಯ ಲಾರಿ ಟರ್ಮಿನಲ್
ಕೆ.ಎಸ್.ಆರ್.ಟಿ.ಸಿ. ನೂತನ ಬಸ್‌ಸ್ಟ್ಯಾಂಡ್ ಹತ್ತಿರ, ಬಳ್ಳಾರಿ.

ಮೊ: 9449871850, 9449871908.

ಹೊಸಪೇಟೆ : 9448717137. ಸಂಡೂರು : 9844229673
ಕೂಡ್ಲಿಗಿ : 9902797033 ಸಿರುಗುಪ್ಪ : 9019180080
ಹೆಚ್.ಬಿ.ಹಳ್ಳಿ : 9886062459 ಕುರುಗೋಡು : 9980154607

ಬಳ್ಳಾರಿ ಬುಧವಾರ 23-09-2026 ಕನ್ನಡ ದಿನಪತ್ರಿಕೆ ಬೆಲೆ 2.00 ರೂ. ಸಂಪುಟ 28 ಸಂಚಿಕೆ 306 ಪುಟ: 6 Ph:9449871850, 9449871909, RNI No-69151/97. Title code:KARKAN04393 / Bellary / E-mail: bellary@sanjevani.com



ಬಳ್ಳಾರಿ- ವಿಜಯನಗರ-ಕೊಪ್ಪಳ ಜಿಲ್ಲೆಗಳ ಆವೃತ್ತಿ

ಇಂಟರ್ ನೆಟ್ 'ಸಂಜೆವಾಣಿ' ನಂ.1ದ ವರ್ಲ್ಡ್ ಕಿಯೋಸ್ಕ್

# ಸಂಜೆವಾಣಿ

1982

ಬಳ್ಳಾರಿ-ಬೆಂಗಳೂರು - ಹುಬ್ಬಳ್ಳಿ - ಕಲಬುರಗಿ - ಮೈಸೂರು - ಮಂಗಳೂರು - ದಾವಣಗೆರೆ - ತುಮಕೂರು - ರಾಯಚೂರು - ಶಿವಮೊಗ್ಗ - ವಿಜಯನಗರ

http://www.sanjevani.com

ಸಂಜೆವಾಣಿ ಜಾಹೀರಾತಿಗಾಗಿ ಸಂಪರ್ಕಿಸಿರಿ

ಸಮಸ್ತ ಜನತೆಯ ಹೆಮ್ಮೆಯ ಸಂಜೆ ದಿನಪತ್ರಿಕೆ
ಸಂಜೆವಾಣಿಯಲ್ಲಿ ಜಾಹೀರಾತು ನೀಡಲು ಕೂಡಲೇ ಸಂಪರ್ಕಿಸಿ.

ಸಂಜೆವಾಣಿ ದೈನಿಕ,ನಂ.2 ವಿಶ್ವೇಶ್ವರಯ್ಯ ಲಾರಿ ಟರ್ಮಿನಲ್
ಕೆ.ಎಸ್.ಆರ್.ಟಿ.ಸಿ. ನೂತನ ಬಸ್‌ಸ್ಟ್ಯಾಂಡ್ ಹತ್ತಿರ. ಬಳ್ಳಾರಿ.
ಮೊ: 9449871850, 9449871908.

ಹೊಸಪೇಟೆ : 9448717137. ಸಂಡೂರು : 9844229673
ಕೂಡ್ಲಿಗಿ : 9902797033 ಸಿರುಗುಪ್ಪ : 9019180080
ಹೆಚ್.ಬಿ.ಹಳ್ಳಿ : 9886062459 ಕುರುಗೋಡು : 9980154607

ಬಳ್ಳಾರಿ ಬುಧವಾರ 23-09-2026 ಕನ್ನಡ ದಿನಪತ್ರಿಕೆ ಬೆಲೆ 2.00 ರೂ. ಸಂಪುಟ 28 ಸಂಚಿಕೆ 306 ಪುಟ: 6 Ph:9449871850, 9449871909, RNI No-69151/97. Title code:KARKAN04393 / Bellary / E-mail: bellary@sanjevani.com

# ಕೈ ಶಾಸಕನ ರಾಜೀನಾಮೆ

## ಬರಪೀಡಿತ ತಾಲ್ಲೂಕುಗಳ ಪಟ್ಟಿಗೆ ಇಂಡಿ ಸೇರಿಸದಿದ್ದಕ್ಕೆ ಬೇಸರ: ಸ್ಪೀಕರ್‌ಗೆ ಯಶವಂತರಾಯಗೌಡ ರಾಜೀನಾಮೆ ಸಲ್ಲಿಕೆ

ಬೆಂಗಳೂರು, ಸೆ. 23- ಬರ ಪೀಡಿತ ತಾಲ್ಲೂಕುಗಳ ಪಟ್ಟಿಯಿಂದ ಇಂಡಿ ಮತ್ತು ಚಡಚಣ ತಾಲ್ಲೂಕು ಕೈ ಬಿಟ್ಟಿರುವುದಕ್ಕೆ ಬೇಸರಗೊಂಡು ಕಾಂಗ್ರೆಸ್‌ನ ಇಂಡಿ ಶಾಸಕ ಯಶವಂತರಾಯಗೌಡ ಪಾಟೀಲ್ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.

ವಿಧಾನಸಭೆಯ ಅಧಿವೇಶನ ನಡೆಯುತ್ತಿರುವ ಸಂದರ್ಭದಲ್ಲೇ ಅವರು ಇಂದು ವಿಧಾನಸಭಾಧ್ಯಕ್ಷ ಜಿ.ಎಸ್. ಪಾಟೀಲ್ ರವರನ್ನು ಭೇಟಿ ಮಾಡಿ ಶಾಸಕ ಸ್ಥಾನಕ್ಕೆ ರಾಜೀನಾಮೆ ಪತ್ರವನ್ನು ಸಲ್ಲಿಸಿದ್ದಾರೆ.

ರಾಜ್ಯ ಸರ್ಕಾರಕ್ಕೆ ಹಲವು ಬಾರಿ ಮನವಿ ಮಾಡಿದರೂ ಇಂಡಿ ಹಾಗೂ ಚಡಚಣ ತಾಲ್ಲೂಕು ಬರ ಘೋಷಣೆಯಾಗಿಲ್ಲ. ನಮ್ಮ ಮಾತಿಗೆ, ನಮ್ಮ ಭಾವನೆಗಳಿಗೆ ಬೆಲೆ ಇಲ್ಲದಂತಾಗಿದೆ. ಹಾಗಾಗಿ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡುತ್ತಿದ್ದೇನೆ ಎಂದು ಅವರು ಹೇಳಿದ್ದಾರೆ.

ಈಗಿನ ರಾಜಕೀಯ ವಾತಾವರಣದಲ್ಲಿ ಬಲಾಢ್ಯರಿಗೆ, ಒತ್ತಡ ತಂತ್ರಗಳನ್ನು ಹೆಣೆಯುವವರಿಗೆ ಮನ್ನಣೆ ಇದೆ. ನಮ್ಮಂತಹ ಸೌಮ್ಯ ಸ್ವಭಾವದವರಿಗೆ ಯಾವುದೇ ಕೆಲಸಗಳಿಗೆ ಮನ್ನಣೆ ದೊರೆಯುತ್ತಿಲ್ಲ. ಆದ ಕಾರಣ ನನ್ನ ಕ್ಷೇತ್ರದ ಆಶಯ, ಆಶೋತ್ತರಗಳಿಗೆ ಸ್ಪಂದಿಸಲು ಸಾಧ್ಯವಾಗದ ಕಾರಣ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡುತ್ತಿದ್ದೇನೆ ಎಂದು ಅವರು ರಾಜೀನಾಮೆ ಪತ್ರದಲ್ಲಿ ತಿಳಿಸಿದ್ದಾರೆ.




ಶಾಸಕರಾದ ಯಶವಂತರಾಯಗೌಡ ಪಾಟೀಲ್ ಅವರು ವಿಧಾನಸಭಾಧ್ಯಕ್ಷರಿಗೆ ರಾಜೀನಾಮೆ ಸಲ್ಲಿಸಿದ್ದು, ಅದು ಇನ್ನು ಅಂಗೀಕಾರವಾಗಿಲ್ಲ.

### ರಾಜೀನಾಮೆ ಪತ್ರ: ವಿಧಾನಸಭೆಯಲ್ಲಿ ಗದ್ದಲ, ಕೋಲಾಹಲ


ಶಾಸಕ ಸ್ಥಾನಕ್ಕೆ ಯಶವಂತರಾಯಗೌಡ ಪಾಟೀಲ್ ರಾಜೀನಾಮೆ ನೀಡಿರುವ ವಿಚಾರದಲ್ಲಿ ವಿಧಾನಸಭೆಯಲ್ಲಿಂದು ಪ್ರಸ್ತಾಪವಾಗಿ ಆಡಳಿತ ಮತ್ತು ವಿಪಕ್ಷ ಸದಸ್ಯರ ನಡುವೆ ವಾಕ್ಸಮರವೇ ನಡೆದು ಸದನದಲ್ಲಿ ಗದ್ದಲ, ಕೋಲಾಹಲದ ವಾತಾವರಣ ರೂಪುಗೊಂಡಿತು.

ರಾಜ್ಯದ ಬರ ಪರಿಸ್ಥಿತಿಯ ಬಗ್ಗೆ ಚರ್ಚೆ ನಡೆಯುತ್ತಿದ್ದ ಸಂದರ್ಭದಲ್ಲಿ ವಿರೋಧ ಪಕ್ಷದ ನಾಯಕರಾದ ಆರ್. ಅಶೋಕ್ ಅವರು, ವಿಧಾನಸಭೆಯಲ್ಲಿ ಶಾಸಕ ಯಶವಂತರಾಯಗೌಡ ಪಾಟೀಲ್ ರವರ ರಾಜೀನಾಮೆ ವಿಷಯವನ್ನು ಪ್ರಸ್ತಾಪಿಸಿ, ಅವರು ರಾಜೀನಾಮೆ ನೀಡಿರುವ ಪತ್ರದ ಪ್ರತಿಯನ್ನು ಪ್ರದರ್ಶಿಸಿ, ಕಾಂಗ್ರೆಸ್ ಪಕ್ಷದ ಶಾಸಕರೇ ರಾಜೀನಾಮೆ ಕೊಟ್ಟಿದ್ದಾರೆ. ಈ ಸರ್ಕಾರಕ್ಕೆ ನಾಚಿಕೆ ಆಗಬೇಕು. ಬರ ನಿರ್ವಹಣೆಯಲ್ಲಿ ಈ ಸರ್ಕಾರ ಸಂಪೂರ್ಣ ವಿಫಲವಾಗಿದೆ ಎಂದು ಹೇಳಿದಾಗ, ವಿಪಕ್ಷ ಸದಸ್ಯರುಗಳೆಲ್ಲಾ ಶೇಮ್.. ಶೇಮ್.. ಎಂದು ಕೂಗಿದರು.



ಕ್ರಮಾಂಕ: MLA/Indi 504 / 2026-27 ದಿನಾಂಕ: 22/09/2026

ವಿಷಯ:- ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡುತ್ತಿರುವ ಬಗ್ಗೆ.



Yashwanthraygoud V. Patil
M.L.A.

ಕ್ರಮಾಂಕ: MLA/Indi 504 / 2026-27 ದಿನಾಂಕ: 22/09/2026

ಗೆ,
ಮಾನ್ಯ ಶ್ರೀ ಜಿ.ಎಸ್ ಪಾಟೀಲರವರು,
ಮಾನ್ಯ ಸಭಾಧ್ಯಕ್ಷರು,
ಕರ್ನಾಟಕ ವಿಧಾನಸಭೆ, ವಿಧಾನಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ:- ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡುತ್ತಿರುವ ಬಗ್ಗೆ.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಿಜಯಪುರ ಜಿಲ್ಲೆಯ ನಾನು ಪ್ರತಿನಿಧಿಸುವ ಇಂಡಿ ತಾಲ್ಲೂಕು 2026-27ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ತೀವ್ರ ಬರಗಾಲಕ್ಕೆ ತುತ್ತಾಗಿದ್ದು, ಆರಂಭದಲ್ಲಿ ಸ್ವಲ್ಪ ಮಳೆ ಬಿದ್ದ ಪ್ರಯುಕ್ತ ರೈತರು ಸಾಲಮಾಡಿ ಬೀಜ, ಗೊಬ್ಬರಗಳನ್ನು ಖರೀದಿಸಿ, ಬಿತ್ತನೆ ಮಾಡಿರುತ್ತಾರೆ. ಆದರೆ ಸಕಾಲಕ್ಕೆ ಮಳೆಯಾಗದ ಕಾರಣ ಬೆಳೆಗಳು ಒಣಗಿಹೋಗಿದ್ದು, ಜನ-ಜಾನುವಾರುಗಳಿಗೆ ಕುಡಿಯುವ ನೀರಿನ ತೊಂದರೆಯುಂಟಾಗಿರುತ್ತದೆ. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಉಪಮುಖ್ಯಮಂತ್ರಿಗಳಿಗೆ ದಿನಾಂಕ:-28.08.2026ರಂದು ಮನವಿ ಪತ್ರವನ್ನು ಸಲ್ಲಿಸಿ, ಇಂಡಿ ತಾಲ್ಲೂಕನ್ನು ಬರಪೀಡಿತ ತಾಲ್ಲೂಕು ಎಂದು ಘೋಷಿಸುವಂತೆ ಮನವಿ ಪತ್ರ ಸಲ್ಲಿಸಲಾಗಿತ್ತು. ಆದರೆ ವಿಜಯಪುರ ಜಿಲ್ಲೆಯ ಒಟ್ಟು 13 ತಾಲ್ಲೂಕುಗಳ ಪೈಕಿ ನನ್ನ ಇಂಡಿ ಮತ್ತು ಚಡಚಣ ಈ 2 ತಾಲ್ಲೂಕುಗಳನ್ನು ಹೊರತುಪಡಿಸಿ, ಇದುವರೆಗೂ ರಾಜ್ಯದ 188 ತಾಲ್ಲೂಕುಗಳನ್ನು ಬರಪೀಡಿತ ತಾಲ್ಲೂಕುಗಳೆಂದು ಘೋಷಿಸಲಾಗಿರುತ್ತದೆ.

ನಾನು ಆಡಳಿತ ಪಕ್ಷದ ಶಾಸಕನಾಗಿದ್ದು, ನಮ್ಮ ಸರ್ಕಾರಕ್ಕೆ ಮುಜುಗರವಾಗಬಾರದೆಂದು ಸೂಕ್ತ ಮತಿಯವಾಗಿ ಹಲವಾರು ಬಾರಿ ಮನವಿ ಮಾಡಿಕೊಂಡಿದ್ದೇನೆ. ಆದರೂ ಸಹ ನಮ್ಮ ಮಾತಿಗೆ, ನಮ್ಮ ಭಾವನೆಗಳಿಗೆ ಬೆಲೆ ಇಲ್ಲದಂತಾಗಿದ್ದು, ಈಗಿನ ರಾಜಕೀಯ ವಾತಾವರಣದಲ್ಲಿ ಬಲಾಢ್ಯರಿಗೆ, ಒತ್ತಡ ತಂತ್ರಗಳನ್ನು ಎಣೆಯುವವರಿಗೆ ಮನ್ನಣೆ ನೀಡಲಾಗುತ್ತಿದೆ. ನಮ್ಮಂತಹ ಸೌಮ್ಯ ಸ್ವಭಾವದವರಿಗೆ ಯಾವುದೇ ಕೆಲಸಗಳಿಗೆ ಮನ್ನಣೆ ದೊರೆಯುತ್ತಿಲ್ಲ.

ಆದ್ದರಿಂದ ನನ್ನ ಕ್ಷೇತ್ರದ ಜನರ ಆಶೆ, ಆಕಾಂಕ್ಷೆಗಳಿಗೆ ಸ್ಪಂದಿಸಲು ಸಾಧ್ಯವಾಗದ ಪ್ರಯುಕ್ತ ನಾನು ಸ್ವ-ಇಚ್ಛೆಯಿಂದ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡುತ್ತಿದ್ದೇನೆ, ದಯವಿಟ್ಟು ಅಂಗೀಕರಿಸಿ.

ವಂದನೆಗಳೊಂದಿಗೆ

ತಮ್ಮ ವಿಶ್ವಾಸಿ,

(ಯಶವಂತರಾಯಗೌಡ ವಿ. ಪಾಟೀಲ)

Mobile : 9483120999, LH-4, Room No. 337, Bangalore E-mail: yypatilmlaofficebng@gmail.com

ಈ ಹಂತದಲ್ಲಿ ಆಡಳಿತ ಮತ್ತು ವಿಪಕ್ಷ ಸದಸ್ಯರ ನಡುವೆ ದೊಡ್ಡಮಟ್ಟದ ಮಾತಿನ ಚಕಮಕಿ ನಡೆಯಿತು.

ಸಚಿವರಾದ ಯು.ಟಿ. ಖಾದರ್, ನರೇಂದ್ರ ಸ್ವಾಮಿ ಇವರುಗಳು ಎದ್ದುನಿಂತು ಇದು ನಮ್ಮ ಪಕ್ಷದ ವಿಚಾರ. ಅವರು ರಾಜೀನಾಮೆ ಕೊಟ್ಟಿದ್ದರೆ ನಮ್ಮ ಪಕ್ಷ ನೋಡಿಕೊಳ್ಳುತ್ತದೆ, ನಿಮಗೇಕೆ ಎಂದು ಹೇಳಿದರಾದರೂ ವಿಪಕ್ಷ ಸದಸ್ಯರು ಸರ್ಕಾರದ ವಿರುದ್ಧ ರಾಜೀನಾಮೆ ವಿಚಾರವನ್ನು ಮುಂದಿಟ್ಟುಕೊಂಡು ವಾಗ್ದಾಳಿ ನಡೆಸಿದರು.

ಗದ್ದಲದ ನಡುವೆಯೇ ಮಾತನಾಡಿದ ಬಿಜೆಪಿಯ ಸುನೀಲ್‌ಕುಮಾರ್ ರವರು ಸದನ ನಡೆಯುತ್ತಿದೆ. ರಾಜೀನಾಮೆ ಬಗ್ಗೆ ಸಭಾಧ್ಯಕ್ಷರು ಸದನಕ್ಕೆ ಮಾಹಿತಿ ಕೊಡಬೇಕು ಎಂದು ಮನವಿ ಮಾಡಿದರು.

ಸದನ ನಡೆಯುವಾಗ ರಾಜೀನಾಮೆ ಕೊಟ್ಟಿರುವುದು ಸರ್ಕಾರಕ್ಕೆ ದೊಡ್ಡ ಅಪಮಾನ. ಇದಕ್ಕಿಂತ ದೊಡ್ಡ ಅಪಮಾನ ಇನ್ನೊಂದಿಲ್ಲ ಎಂದರು.

ಪ್ರತಿಪಕ್ಷಗಳ ಮಾತಿಗೆ ತಿರುಗೇಟು ನೀಡಿದ ಉಪಮುಖ್ಯಮಂತ್ರಿ ಡಾ. ಜಿ. ಪರಮೇಶ್ವರ್ ಇದಕ್ಕೆಲ್ಲಾ ನಿಮ್ಮ ಕೇಂದ್ರ ಸರ್ಕಾರವೇ ಕಾರಣ ಎಂದು ಹೇಳಿದ್ದು ಮತ್ತೆ ಸದನದಲ್ಲಿ ಆಡಳಿತ ಮತ್ತು ವಿಪಕ್ಷ ಸದಸ್ಯರ ನಡುವೆ ಮಾತಿನ ಚಕಮಕಿಗೆ ಕಾರಣವಾಯಿತು.

ನಂತರ ಮಾತು ಮುಂದುವರೆಸಿದ ಉಪಮುಖ್ಯಮಂತ್ರಿ ಡಾ. ಜಿ. ಪರಮೇಶ್ವರ್, ಕೇಂದ್ರ ಸರ್ಕಾರದ ಕೆಲವು ಮಾನದಂಡಗಳಿಂದ ಕೆಲವು ತಾಲ್ಲೂಕುಗಳನ್ನು ಬರಪೀಡಿತ ಪಟ್ಟಿಗೆ ಸೇರಿಸಲು ಆಗುತ್ತಿಲ್ಲ. ನಾವು ಪತ್ರ ಬರೆದಿದ್ದರೂ ಕೇಂದ್ರ ಸರ್ಕಾರ ನಿಯಮಾವಳಿಗಳಲ್ಲಿ ರಿಯಾಯ್ತಿ ನೀಡುತ್ತಿಲ್ಲ ಎಂದು ಹೇಳಿದರು.

ಈ ಹಂತದಲ್ಲಿ ಮಧ್ಯೆ ಪ್ರವೇಶಿಸಿ ಮಾತನಾಡಿದ ವಿಪಕ್ಷ ನಾಯಕ ಆರ್. ಅಶೋಕ್, ಈ ನಿಯಮಾವಳಿಗಳನ್ನು ಮಾಡಿದ್ದೇ ನಿಮ್ಮ ಯುಪಿಎ ಸರ್ಕಾರ ಎಂದರು.

ಈ ಹಂತದಲ್ಲಿ ಮತ್ತೆ ಆಡಳಿತ ಮತ್ತು ಪ್ರತಿಪಕ್ಷಗಳ ಸದಸ್ಯರ ನಡುವೆ ಮಾತಿನ ಚಕಮಕಿ ನಡೆಯಿತು.

ಪ್ರತಿಪಕ್ಷ ನಾಯಕ ಆರ್. ಅಶೋಕ್ ಎದ್ದುನಿಂತು ಶಾಸಕರು ರಾಜೀನಾಮೆ ನೀಡಿದ್ದಾರೋ, ಇಲ್ಲವೋ ಅದನ್ನು ಹೇಳಿ ಎಂದು ಸಭಾಧ್ಯಕ್ಷರಲ್ಲಿ ಮನವಿ ಮಾಡಿದರು.

ಒಂದು ಕಡೆ ಸರ್ಕಾರ ಪಾಪರ್ ಎಂದು ಹಣಕಾಸು ಇಲಾಖೆ ಹೇಳುತ್ತಿದೆ. ಇನ್ನೊಂದು ಕಡೆ ಬರ ನಿರ್ವಹಣೆ ಮಾಡುತ್ತಿಲ್ಲ ಎಂದು ಆರ್. ಅಶೋಕ್ ದೂರಿದರು.

ಈ ಹಂತದಲ್ಲಿ ಮತ್ತೆ ಸದನದಲ್ಲಿ ಪ್ರತಿಪಕ್ಷ ಮತ್ತು ಆಡಳಿತ ಪಕ್ಷದ ಸದಸ್ಯರ ನಡುವೆ ಮಾತಿನ ವಾಕ್ಸಮರ ನಡೆದು ಗದ್ದಲದ ಪರಿಸ್ಥಿತಿ ರೂಪುಗೊಂಡಿತು.

ಸಭಾಧ್ಯಕ್ಷ ಜಿ.ಎಸ್. ಪಾಟೀಲ್ ಅವರು, ಉಪಮುಖ್ಯಮಂತ್ರಿಗಳು ಮಾತನಾಡುತ್ತಿದ್ದಾರೆ. ಈ ರೀತಿ ಮಧ್ಯೆ ಮಧ್ಯೆ ಮಾತನಾಡುವುದು ಸರಿಯಲ್ಲ ಎಂದು ಹೇಳಿದರಾದರೂ ಸದಸ್ಯರುಗಳ ನಡುವೆ ಮಾತಿನ ಚಕಮಕಿ ಮುಂದುವರೆದೇ ಇತ್ತು.

## ನಾಳೆ ಹಾನಗಲ್ಲು ಕುಮಾರ ಶಿವಯೋಗಿಗಳ ಮತ್ತು ಜಗದ್ಗುರು ಡಾ. ಸಂಗನಬಸವ ಮಹಾಸ್ವಾಮಿಗಳ ಜಯಂತ್ಯೋತ್ಸವ

ಸಂಜೆವಾಣಿ ವಾರ್ತೆ

ಬಳ್ಳಾರಿ, ಸೆ. 23: ಅಖಿಲ ಭಾರತ ವೀರಶೈವ ಮಹಾಸಭೆ, ಶ್ರೀ ಮದ್ವೀರಶೈವ ಶಿವಯೋಗ ಮಂದಿರ ಸಂಸ್ಥೆಗಳ ಸಂಸ್ಥಾಪಕ ಮಹಾಗುರುಗಳಾದ ಹಾನಗಲ್ಲ ಶ್ರೀ ಗುರು ಕುಮಾರ ಮಹಾಶಿವಯೋಗಿಗಳ 159ನೇ ಹಾಗೂ ಜಗದ್ಗುರು ಡಾ. ಸಂಗನಬಸವ ಮಹಾಸ್ವಾಮಿಗಳ 88ನೇ ಜಯಂತ್ಯೋತ್ಸವವನ್ನು ಸೆಪ್ಟಂಬರ್ 24ರ ಗುರುವಾರ ಸಂಜೆ 7 ಗಂಟೆಗೆ ಶ್ರೀ ಜಗದ್ಗುರು ಕೊಟ್ಟೂರು ಸ್ವಾಮಿ ಸಂಸ್ಥಾನ ಮಠದಲ್ಲಿ ಏರ್ಪಡಿಸಲಾಗಿದೆ.

ಈ ಕುರಿತು ಶ್ರೀ ಜಗದ್ಗುರು ಕೊಟ್ಟೂರು ಸ್ವಾಮಿ ಸಂಸ್ಥಾನ ಮಠದ ವ್ಯವಸ್ಥಾಪಕರಾದ ಎಸ್.ಎನ್. ದೇವೇಂದ್ರಗೌಡ ಅವರು ಪತ್ರಿಕಾ ಪ್ರಕಟಣೆ ನೀಡಿದ್ದು, ಜಗದ್ಗುರು ಕೊಟ್ಟೂರು ಬಸವಲಿಂಗ ಮಹಾಸ್ವಾಮಿಗಳ ಸಾನಿಧ್ಯದಲ್ಲಿ ಸೆಪ್ಟಂಬರ್ 24ರ ಗುರುವಾರ ಬೆಳಗ್ಗೆ 10 ಗಂಟೆಗೆ ಶ್ರೀಮಠದಲ್ಲಿ ಷಟಸ್ಥಲ ಧ್ವಜಾರೋಹಣ, ಸಂಜೆ 7 ಗಂಟೆಯಿಂದ 8.30ರ ವರಗೆ "ಜೀವನ ದರ್ಶನ' ಪ್ರವಚನ. ಅಕ್ಟೋಬರ್ 4ರ ಭಾನುವಾರ ಬೆಳಗ್ಗೆ 10 ಗಂಟೆಗೆ 1111 ಮುತ್ತೈದೆಯರಿಗೆ ಉಡಿ ತುಂಬುವ ಸಮಾರಂಭ ನಡೆಯಲಿದೆ ಹಾಗೂ ಸಂಜೆ ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಮಠದ ರಥೋತ್ಸವವು ಸಕಲ ವಾದ್ಯ ಗೋಷ್ಟಿಗಳಿಂದ ವಿಜೃಂಭಣೆಯಿಂದ ನಡೆಯಲಿದೆ ಎಂದು ಅವರು ತಿಳಿಸಿದ್ದಾರೆ.

ಸೆಪ್ಟಂಬರ್ 24 ರಿಂದ ಅಕ್ಟೋಬರ್ 4ರ ವರೆಗೆ ಶ್ರೀಮಠದಲ್ಲಿ ನಿತ್ಯ ನಡೆಯಲಿರುವ "ಜೀವನ ದರ್ಶನ' ಪುರಾಣ ಪ್ರವಚನದಲ್ಲಿ ದರೂರಿನ ಶ್ರೀಸಂಗನಬಸವೇಶ್ವರ ಮಠದ ಕೊಟ್ಟೂರು ಸ್ವಾಮಿಗಳು, ಕುರುಗೋಡು ಮತ್ತು ಗರಗನಾಗಲಾಪುರದ ವಿರಕ್ತಮಠದ ನಿರಂಜನಪ್ರಭು ಸ್ವಾಮಿಗಳು, ಸೋಮಸಮುದ್ರ ವಿರಕ್ತಮಠದ ಸಿದ್ದಲಿಂಗಸ್ವಾಮಿಗಳು, ಬೂದುಗುಂಪದ ವಿರಕ್ತಮಠದ ಸಿದ್ದೇಶ್ವರ ಸ್ವಾಮಿಗಳು ಮತ್ತು ಶ್ರೀಧರಗಡ್ಡೆಯ ವಿರಕ್ತಮಠದ ಮರಿಕೊಟ್ಟೂರು ದೇಶೀಕರು ಪಾಲ್ಗೊಳ್ಳಲಿದ್ದಾರೆ.

ಖ್ಯಾತ ಪ್ರವಚನಕಾರಾದ ಹರ್ಲಾಪುರದ ಹರ್ತಿಮಠ ಸಂಸ್ಥಾನದ ವೇದಮೂರ್ತಿ ಸದಾನಂದ ಶಾಸ್ತ್ರಿಗಳು "ಜೀವನ ದರ್ಶನ' ಪ್ರವಚನ ನಡೆಸಲಿದ್ದಾರೆ. ಬಿಳೇಬಾಳದ ಶಿವಲಿಂಗಯ್ಯ ಗವಾಯಿಗಳು ಸಂಗೀತ ಮತ್ತು ಹೊಳಲು ಗ್ರಾಮದ ಸಿದ್ದಲಿಂಗೇಶ ಅವರು ತಬಲಾ ಸಾಥ್ ನೀಡಲಿದ್ದಾರೆ.

ಈ ಕಾರ್ಯಕ್ರಮಗಳು ಮತ್ತು ಪುರಾಣಕ್ಕೆ ಭಕ್ತಾಧಿಗಳು ಹಾಜರಾಗಲು ವೀರಶೈವ ವಿದ್ಯಾವರ್ಧಕ ಸಂಘವು ಬಳ್ಳಾರಿಯ ಬಸವೇಶ್ವರ ನಗರ, ಶ್ರೀಕನಕ ದುರ್ಗಮ್ಮ ಗುಡಿ, ಎಸ್ಪಿ ಸರ್ಕಲ್, ಮೋತಿ ಸರ್ಕಲ್, ಸೋಮಸಮುದ್ರ ಮತ್ತು ಶ್ರೀಧರಗಡ್ಡೆ ಗ್ರಾಮದಿಂದ ನಿತ್ಯವೂ ಉಚಿತವಾಗಿ ಬಸ್ ಸೌಲಭ್ಯಗಳನ್ನು ಒದಗಿಸಿದೆ. ಶ್ರೀಮಠದ ಭಕ್ತಾಧಿಗಳಿಗೆ ನಿತ್ಯವೂ ಪ್ರಸಾದದ ವ್ಯವಸ್ಥೆಯನ್ನು ಮಾಡಿದೆ.

ಆಸಕ್ತರು, ಎಸ್.ಎನ್. ದೇವೇಂದ್ರಗೌಡ, ವ್ಯವಸ್ಥಾಪಕರು, ಶ್ರೀ ಜಗದ್ಗುರು ಕೊಟ್ಟೂರು ಸ್ವಾಮಿ ಸಂಸ್ಥಾನ ಮಠ, ಮೊಬೈಲ್ ಸಂಖ್ಯೆ : 96111 73758 ಗೆ ಕರೆ ಮಾಡಿರಿ.

## ತುಂಗಭದ್ರ ಜಲಾಶಯದ ನೀರಾವರಿ ಸಲಹಾ ಸಮಿತಿ ಸಭೆ ಕರೆಯಲು ರೈತ ಸಂಘದ ಮನವಿ

(ಸಂಜೆವಾಣಿ ಪ್ರತಿನಿಧಿಯಿಂದ)

ಬಳ್ಳಾರಿ, ಸೆ.23: ತುಂಗಭದ್ರ ಜಲಾಶಯದ ನೀರಾವರಿ ಸಲಹಾ ಸಮಿತಿಯ ಸಭೆಯನ್ನು ಕೂಡಲೇ ಕರೆಯಬೇಕೆಂದು ತುಂಗಭದ್ರ ರೈತ ಸಂಘದ ಅಧ್ಯಕ್ಷ ದರೂರು ಪುರುಷೋತ್ತಮಗೌಡ ಡಿಸಿ ನಾಗೇಂದ್ರ ಪ್ರಸಾದ್ ಅವರಿಗೆ ಮದು ಮನವಿ ಸಲ್ಲಿಸಿದ್ದಾರೆ.



ಈ ಹಿಂದೆ ನಡೆದ ಸಭೆಯಲ್ಲಿ ಕರ್ನಾಟಕ ಮತ್ತು ಆಂಧ್ರ ಪ್ರದೇಶದ ಜಲಾಶಯದ ಎಡದಂಡೆ ಹಾಗೂ ಬಲದಂಡೆಯ ಎಲ್ಲಾ ನಾಲೆಗಳಿಗೂ 90 ದಿನಗಳವರೆಗೆ ನವಂಬರ್ 21ರ ವರೆಗೆ. ಎಲ್ಲಾ ನಾಲೆಗಳಿಗೂ ಮತ್ತು ನದಿಗೂ ಸೇರಿ ಪ್ರತಿದಿನಕ್ಕೆ 9,500 ಕ್ಯೂಸೆಸ್ ನೀರು ಬಳಸಬೇಕೆಂದು ತೀರ್ಮಾನ ಕೈಗೊಂಡಿತ್ತು.

ಆದರೆ ಸುಮಾರು 15 ದಿನಗಳಿಂದ ದಿನಕ್ಕೆ 12,000 ಕ್ಯೂಸೆಕ್ಸ್ ಮೇಲ್ಪಟ್ಟು ಜಲಾಶಯದಿಂದ ನೀರು ಬಳಸಲಾಗುತ್ತಿದೆ. ಈ ದಿನಕ್ಕೆ ಜಲಾಶಯದಲ್ಲಿರುವುದು 77 ಟಿಎಂಸಿ ನೀರು ಉಳಿದಿದೆ. ಈ ನೀರಿನಲ್ಲಿ ಕುಡಿಯುವ ನೀರು, ಡೆಡ್ ಸ್ಟೋರೇಜ್ ಮತ್ತು ಯವಪರೇಷನ್ ಲಾಸ್ 18 ಟಿಎಂಸಿ ತೆಗೆದರೆ ಉಳಿಯುವುದು 59 ಟಿಎಂಸಿ ನೀರು ಮಾತ್ರ ಉಳಿಯಲಿದೆ.

ರೈತರಿಗೆ ಸಂಪೂರ್ಣ ಬೆಳೆ ಬರಲು ನವೆಂಬರ್ 30ರ ವರೆಗೆ ನೀರು ಬೇಕು ಮತ್ತು ಮೆಣಸಿನಕಾಯಿ ಬೆಳೆಗೆ ಡಿಸೆಂಬರ್ 30ರ ವರೆಗೆ ನೀರು ಬೇಕಾಗಲಿದೆ. ಈಗಾಗಲೇ ಬಳ್ಳಾರಿ, ವಿಜಯನಗರ, ಕೊಪ್ಪಳ, ರಾಯಚೂರು ಜಿಲ್ಲೆಗಳಲ್ಲಿ ಮತ್ತು ಆಂಧ್ರಪ್ರದೇಶದ ಅನಂತಪುರ ಮತ್ತು ಕರ್ನೂಲು ಜಿಲ್ಲೆಗಳಲ್ಲಿ ಉತ್ತಮ ಮಳೆಯಾಗಿರುವುದರಿಂದ ರೈತರ ಸಂಪೂರ್ಣ ಬೆಳೆ ಬೆಳೆಯಲು ನೀರಿನ ಜಲಾಶಯದ ನೀರನ್ನು ಉಳಿಸುವ ಉದ್ದೇಶದಿಂದ ಶೀಘ್ರವೇ ಬಳ್ಳಾರಿ. ವಿಜಯನಗರ, ಕೊಪ್ಪಳ, ರಾಯಚೂರು ಜಿಲ್ಲೆಗಳ ಮಾನ್ಯ ಸಚಿವರು, ಶಾಸಕರು, ಸಂಸದರು ಹಾಗೂ ವಿಧಾನ ಪರಿಷತ್ ಸದಸ್ಯರು ಮತ್ತು ರೈತ ಮುಖಂಡರನ್ನು ಒಳಗೊಂಡಂತೆ ಶೀಘ್ರವೇ ನೀರಾವರಿ ಸಲಹಾ ಸಮಿತಿ ಸಭೆ ಕರೆದು ಸೂಕ್ತ ನಿರ್ಣಯ ಕೈಗೊಳ್ಳಬೇಕೆಂದು ಮನವಿ ಮಾಡಿದ್ದಾರೆ

## ಸದನಕ್ಕೆ ಸಚಿವರು, ಶಾಸಕರ ಗೈರು ವಿಪಕ್ಷಗಳ ಆಕ್ರೋಶ

ಬೆಂಗಳೂರು, ಸೆ. 23- ವಿಧಾನಸಭೆಯಲ್ಲಿಂದು ಆಡಳಿತ ಪಕ್ಷದ ಬಹುತೇಕ ಸಚಿವರು ಹಾಗೂ ಶಾಸಕರ ಗೈರು ಹಾಜರಿ ವಿಪಕ್ಷಗಳ ಆಕ್ಷೇಪ, ಆಕ್ರೋಶಕ್ಕೆ ಕಾರಣವಾಗಿ ಸದನವನ್ನು 10 ನಿಮಿಷ ಕಾಲ ಮುಂದೂಡಲಾಯಿತು.

ಇಂದು ವಿಧಾನಸಭೆ ಆರಂಭವಾಗುತ್ತಿದ್ದಂತೆಯೇ ಸಭಾಧ್ಯಕ್ಷ ಜಿ.ಎಸ್. ಪಾಟೀಲ್ ರವರು ದಾದಾ ಸಾಹೇಬ್ ಪಾಲ್ಕೆ ಪ್ರಶಸ್ತಿ ಪುರಸ್ಕೃತರಾದ ನಟ ಅನಂತ್‌ನಾಗ್ ಅವರ ಅಭಿನಂದನಾ ಕಲಾಪವನ್ನು ಕೈಗೆತ್ತಿಗೊಂಡಾಗ ಆಡಳಿತ ಪಕ್ಷದ 10- 12 ಶಾಸಕರು, ಸಚಿವರಾದ ಕೃಷ್ಣಬೈರೇಗೌಡ, ಸಂತೋಷ್ ಲಾಡ್, ಕುಮಾರ್ ಬಂಗಾರಪ್ಪ ಮಾತ್ರ ಸದನದಲ್ಲಿ ಹಾಜರಿದ್ದರು. ಇದರಿಂದ ಕೆರಳಿ, ಕೆಂಡಮಂಡಲವಾದ ವಿಪಕ್ಷ ನಾಯಕ ಆರ್. ಅಶೋಕ್, ಸದನ ಖಾಲಿ ಖಾಲಿ, ಮಂತ್ರಿಗಳೇ ಇಲ್ಲ. ಸದನ ಖಾಲಿ ಇರುವಾಗ ನಟ ಅನಂತ್‌ನಾಗ್ ಅವರಿಗೆ ಅಭಿನಂದಿಸುವ ಕಲಾಪ ಸರಿಯಲ್ಲ. ಸಭಾಧ್ಯಕ್ಷರೇ ಸದನವನ್ನು 10 ನಿಮಿಷ ಮುಂದೂಡಿ ಎಂದು ಒತ್ತಾಯಿಸಿದರು.

ಸಚಿವರುಗಳು, ಆಡಳಿತ ಪಕ್ಷದ ಸದಸ್ಯರು ಸದನಕ್ಕೆ ಬರಲ್ಲ. ಸದನವನ್ನು ಖಾಲಿ ಇಟ್ಟುಕೊಂಡು ನಟ ಅನಂತ್‌ನಾಗ್ ಅವರಿಗೆ ಗೌರವ ಸಲ್ಲಿಸುವುದು ಬೇಡ. ನಾಳೆ ಪತ್ರಿಕೆಗಳಲ್ಲಿ ಖಾಲಿ ಖಾಲಿ ಸದನದಲ್ಲೇ ನಟ ಅನಂತ್‌ನಾಗ್ ಅವರಿಗೆ ಅಭಿನಂದನೆ ಎಂಬ ವರದಿಗಳು ಬರುತ್ತವೆ. ಹಾಗಾಗಿ ಖಾಲಿ ಸದನವನ್ನು ಇಟ್ಟುಕೊಂಡು ಅಭಿನಂದನಾ ಕಲಾಪ ಬೇಡ ಇದು ನಿಮಗೆ ಗೌರವ ತರುವುದಿಲ್ಲ. ದಯವಿಟ್ಟು ಸದನವನ್ನು ಮುಂದೂಡಿ ಎಂದು ಆಗ್ರಹಿಸಿದರು.

### ಟಿ.ಬಿ.ಡ್ಯಾಂ ನೀರಿನ ಮಟ್ಟ



ಇಂದಿನ ಮಟ್ಟ: 1,625.28 ಅಡಿಗಳು

| | |
|---|---|
| ಒಳಹರಿವು | : 0 ಕ್ಯೂಸೆಕ್ಸ್ |
| ಹೊರಹರಿವು | : 10,879 ಕ್ಯೂಸೆಕ್ಸ್ |
| ಸಾಮರ್ಥ್ಯ | : 77.41 ಟಿ.ಎಂ.ಸಿ |
| ಗರಿಷ್ಠ ಮಟ್ಟ | : 1633.00 ಅಡಿ |

## ಖಜಾನೆ ಖಾಲಿ: ಸಿಎಂ ರಾಜೀನಾಮೆಗೆ ಆಗ್ರಹಿಸಿ ಬಿಜೆಪಿ ಧರಣಿ

ಬೆಂಗಳೂರು, ಸೆ. 23- ರಾಜ್ಯ ಸರ್ಕಾರದ ಖಜಾನೆ ಖಾಲಿಯಾಗಿದೆ. ಆರ್ಥಿಕತೆ ನಿರ್ವಹಣೆಯಲ್ಲಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವಿಫಲರಾಗಿದ್ದು, ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿ ಬಿಜೆಪಿ ಮತ್ತು ಜೆಡಿಎಸ್‌ನ ಶಾಸಕರುಗಳು ವಿಧಾನಸೌಧದ ಮುಂದೆ ಧರಣೆ ನಡೆಸಿದರು.

ವಿಧಾನಸೌಧದ ಮುಂಭಾಗದಲ್ಲಿರುವ ಕೆಂಗಲ್ ಹನುಮಂತಯ್ಯ ಪ್ರತಿಮೆ ಬಳಿ ಬಿಜೆಪಿ ಮತ್ತು ಜೆಡಿಎಸ್‌ನ ಎಲ್ಲಾ ವಿಧಾನಸಭಾ ಸದಸ್ಯರು ಹಾಗೂ ವಿಧಾನ ಪರಿಷತ್ ಸದಸ್ಯರುಗಳು ಪ್ರತಿಪಕ್ಷ ನಾಯಕರುಗಳಾದ ಆರ್.ಅಶೋಕ್, ಛಲವಾದಿ ನಾರಾಯಣಸ್ವಾಮಿ ಹಾಗೂ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ರವರ ರಾಜೀನಾಮೆಗೆ ಆಗ್ರಹಿಸಿ ಘೋಷಣೆಗಳನ್ನು ಕೂಗಿದರು. ರಾಜ್ಯದ ಖಜಾನೆ ಖಾಲಿಯಾಗಿರುವುದನ್ನು ಸಂಕೇತಿಸಲು ಪ್ರತಿಭಟನಾನಿರತ ಬಿಜೆಪಿ ಮತ್ತು ಜೆಡಿಎಸ್ ಶಾಸಕರುಗಳು ಖಾಲಿ ಚೆಂಬು, ತೆಂಗಿನ ಚಿಪ್ಪುಗಳನ್ನು ಹಿಡಿದು ಪ್ರತಿಭಟನೆ ನಡೆಸಿದ್ದು ವಿಶೇಷವಾಗಿತ್ತು.

ರಾಜ್ಯ ಆರ್ಥಿಕ ಇಲಾಖೆಯೇ ಸರ್ಕಾರದಲ್ಲಿ ದುಡ್ಡಿಲ್ಲ ಎಂದು ಪತ್ರ ಬರೆದಿದೆ. ಸರ್ಕಾರ ಪಾಪರ್ ಆಗಿದೆ. ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ರವರಿಗೆ ಆರ್ಥಿಕ ಇಲಾಖೆ ಮೇಲೆ ನಿಯಂತ್ರಣ ಇಲ್ಲ. ಆರ್ಥಿಕ ಸ್ಥಿತಿ ಹಳ್ಳ ಹಿಡಿದಿದೆ ಎಂದು ಪ್ರತಿಭಟನಾನಿರತ ಬಿಜೆಪಿ ಮತ್ತು ಜೆಡಿಎಸ್ ಶಾಸಕರುಗಳು ಘೋಷಣೆ ಕೂಗಿ ಬಿತ್ತಿ ಪತ್ರಗಳನ್ನು ಪ್ರದರ್ಶಿಸಿದರು.

ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಘೋಷಣೆ ಬೋಗಸ್ ಘೋಷಣೆ, ಡಿ.ಕೆ. ಕ್ಯಾಬಿನೆಟ್ ಬೋಗಸ್ ಕ್ಯಾಬಿನೆಟ್ ಎಂಬ ಘೋಷಣೆಗಳನ್ನು ಪ್ರತಿಭಟನಾಕಾರರು ಕೂಗಿದರು. ಖಜಾನೆ ಖಾಲಿ.. ಖಾಲಿ.. ಸರ್ಕಾರ ಪಾಪರ್ ಎಂಬ ಘೋಷಣೆಗಳನ್ನು ಕೂಗಲಾಯಿತು.



ಸಿಎಂ ರಾಜೀನಾಮೆಗೆ ಆಗ್ರಹ

ಈ ಪ್ರತಿಭಟನೆ ಸಂದರ್ಭದಲ್ಲಿ ಮಾತನಾಡಿದ ಪ್ರತಿಪಕ್ಷ ನಾಯಕ ಆರ್. ಅಶೋಕ್, ಹಣಕಾಸು ಇಲಾಖೆ ನಿಭಾಯಿಸಲು ಮುಖ್ಯಮಂತ್ರಿಗಳಿಂದ ಆಗುತ್ತಿಲ್ಲ. ಡಿ.ಕೆ. ಶಿವಕುಮಾರ್ ರವರು ಮುಖ್ಯಮಂತ್ರಿ ಆಗಿರಲು ಲಾಯಕ್ ಇಲ್ಲ. ತಕ್ಷಣವೇ ರಾಜೀನಾಮೆ ಕೊಡಬೇಕು ಎಂದು ಆಗ್ರಹಿಸಿದರು.

ಇದು ಪಾಪರ್ ಸರ್ಕಾರ, ಇವತ್ತು ಕರ್ನಾಟಕದಲ್ಲಿ ಸರ್ಕಾರ ನಡೆಸುವಂತಹ ಯೋಗ್ಯತೆಯನ್ನು ಕಾಂಗ್ರೆಸ್ ಕಳೆದುಕೊಂಡಿದೆ. ಡಿ.ಕೆ. ಶಿವಕುಮಾರ್ ಸರ್ಕಾರ ದಿವಾಳಿ ಆಗಿರುವುದಕ್ಕೆ ಹಣಕಾಸು ಇಲಾಖೆಯವರು ಶ್ವೇತಪತ್ರ ಬಿಡುಗಡೆ ಮಾಡಿ ಬಿಟ್ಟಿದ್ದಾರೆ ಎಂದು ಹೇಳಿದರು.

ಡಿ.ಕೆ. ಶಿವಕುಮಾರ್ ರವರು ಮೊನ್ನೆ ಮಂಗಳೂರಿಗೆ ಹೋಗಿ 32 ಸಾವಿರ ಕೋಟಿ ರೂ. ಅಭಿವೃದ್ಧಿಗೆ ಘೋಷಿಸಿದರು. ಹಿಂದೆ ಸಿದ್ದರಾಮಯ್ಯ ಸಹ ಸಾವಿರಾರು ಕೋಟಿ ಅಭಿವೃದ್ಧಿಗೆ ಘೋಷಣೆ ಮಾಡಿದ್ದರು. ಆದರೆ ಸರ್ಕಾರದಲ್ಲಿ ಹಣವೇ ಇಲ್ಲ, ಬರ ಪರಿಹಾರ ಕಾರ್ಯಕ್ಕೆ ದುಡ್ಡು ಕೊಡಲು ಆಗುತ್ತಿಲ್ಲ ಎಂದು ವಾಗ್ದಾಳಿ ನಡೆಸಿದರು. ಕಾಂಗ್ರೆಸ್ ಪಕ್ಷ ಖಾಲಿ ಡಬ್ಬ ಎನ್ನುವುದು ಇಂದು ಗೊತ್ತಾಗುತ್ತಿದೆ. 5 ತಿಂಗಳಾಯ್ತು ಬಡವರಿಗೆ ಪಿಂಚಣಿ ಹೋಗಿಲ್ಲ, ಶಿಕ್ಷಕರಿಗೆ ಸಂಬಳ ಇಲ್ಲ, ಹಾಲು ಉತ್ಪಾದಕರಿಗೆ ಸಬ್ಸಿಡಿ ಹಣ ಕೊಟ್ಟಿಲ್ಲ ಎಂದು ದೂರಿದರು.

ಡಿ.ಕೆ. ಶಿವಕುಮಾರ್ ರವರು ಕ್ಯಾಬಿನೆಟ್ ಮಾಡಿ ಘೋಷಣೆ ಮಾಡಿದ್ದಷ್ಟೇ ಭಾಗ್ಯ. ಇದು ಘೋಷಣೆಗಳ ಸರ್ಕಾರ, ಬೋಗಸ್ ಸರ್ಕಾರ ಎಂದು ಟೀಕಿಸಿದರು.

### ಶ್ವೇತಪತ್ರಕ್ಕೆ ಬಿವೈವಿ ಒತ್ತಾಯ

ಇದೇ ಪ್ರತಿಭಟನೆಯಲ್ಲಿ ಪಾಲ್ಗೊಂಡು ಮಾತನಾಡಿದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು, ರಾಜ್ಯದ ಆರ್ಥಿಕ ಪರಿಸ್ಥಿತಿಯ ಬಗ್ಗೆ ಮುಖ್ಯಮಂತ್ರಿಗಳು ಶ್ವೇತಪತ್ರ ಹೊರಡಿಸಬೇಕು ಎಂದು ಒತ್ತಾಯಿಸಿದರು. ರಾಜ್ಯ ಸರ್ಕಾರ 4 ಲಕ್ಷಕ್ಕೂ ಹೆಚ್ಚು ಕೋಟಿ ಹೊಸ ಸಾಲ ಮಾಡಿದೆ. ಒಟ್ಟಾರೆಯಾಗಿ 8 ಲಕ್ಷ ಕೋಟಿ ರೂಪಾಯಿ ಸಾಲ ಆಗಿದೆ. ಸಾಲ ಬಿಟ್ಟರೆ ರಾಜ್ಯದಲ್ಲಿ ಯಾವುದೇ ಅಭಿವೃದ್ಧಿ ಕಾರ್ಯ ಆಗಿಲ್ಲ ಎಂದು ದೂರಿದರು.

## ಬಳ್ಳಾರಿ- ವಿಜಯನಗರ ರಾಷ್ಟ್ರೀಯ ಲೋಕ್ ಅದಾಲತ್ ಯಶಸ್ವಿ 71 ಸಾವಿರಕ್ಕೂ ಹೆಚ್ಚು ಪ್ರಕರಣಗಳ ಇತ್ಯರ್ಥ, 25 ಕೋಟಿ ರೂ.ಗೂ ಅಧಿಕ ಮೊತ್ತ ಪರಿಹಾರ

ಸಂಜೆವಾಣಿ ವಾರ್ತೆ

ಬಳ್ಳಾರಿ,ಸೆ.23: ಬಳ್ಳಾರಿ ಹಾಗೂ ವಿಜಯನಗರ ಜಿಲ್ಲೆಗಳ ನ್ಯಾಯಾಲಯಗಳಲ್ಲಿ ಸೆಪ್ಟೆಂಬರ್ 19 ರಂದು ಹಮ್ಮಿಕೊಳ್ಳಲಾಗಿದ್ದ ರಾಷ್ಟ್ರೀಯ ಲೋಕ್ ಅದಾಲತ್ ಅಭೂತಪೂರ್ವ ಯಶಸ್ಸು ಕಂಡಿದ್ದು, ನ್ಯಾಯಾಲಯದಲ್ಲಿ ಬಾಕಿ ಇದ್ದ ಪ್ರಕರಣಗಳು ಹಾಗೂ ವ್ಯಾಜ್ಯ ಪೂರ್ವ ಪ್ರಕರಣಗಳು ಸೇರಿದಂತೆ ಒಟ್ಟು 71,223 ಪ್ರಕರಣಗಳು ರಾಜಿ ಸಂಧಾನದ ಮೂಲಕ ಇತ್ಯರ್ಥಗೊಂಡಿವೆ.

ಈ ಕುರಿತು ಮಾಹಿತಿ ನೀಡಿರುವ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರೂ ಆದ ಸಿದ್ದಲಿಂಗ ಪ್ರಭು ಅವರು, ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಯ 31 ನ್ಯಾಯಾಲಯಗಳಲ್ಲಿ ಲೋಕ್ ಅದಾಲತ್ ಯಶಸ್ವಿಯಾಗಿ ಜರುಗಿದೆ ಎಂದು ತಿಳಿಸಿದ್ದಾರೆ.

*4,264 ಬಾಕಿ ಪ್ರಕರಣಗಳ ಇತ್ಯರ್ಥ:*

ನ್ಯಾಯಾಲಯಗಳಲ್ಲಿ ಬಾಕಿ ಇದ್ದ ಒಟ್ಟು 4,264 ಪ್ರಕರಣಗಳನ್ನು ರಾಜಿ ಸಂಧಾನದ ಮೂಲಕ ಬಗೆಹರಿಸಲಾಗಿದ್ದು, ಒಟ್ಟು 15,42,66,848 (15.42 ಕೋಟಿ) ರೂಪಾಯಿಗಳ ಪರಿಹಾರ ಮೊತ್ತವನ್ನು ಕಕ್ಷಿದಾರರಿಗೆ ಕೊಡಮಾಡಲಾಗಿದೆ.

*ಇತ್ಯರ್ಥಗೊಂಡ ಪ್ರಕರಣಗಳ ವಿವರ:*


ಜನನ ಪ್ರಮಾಣ ಪತ್ರ ಅರ್ಜಿಗಳು: 1,011

ದಂಡ ವಿಧಿಸಬಹುದಾದ ಕ್ರಿಮಿನಲ್ ಪ್ರಕರಣಗಳು: 2,357

ಇತರೆ ಕ್ರಿಮಿನಲ್ ಪ್ರಕರಣಗಳು: 409

ರಾಜಿಯಾಗಬಹುದಾದ ಕ್ರಿಮಿನಲ್ ಪ್ರಕರಣಗಳು: 174

ಚೆಕ್ ಬೌನ್ಸ್ ಪ್ರಕರಣಗಳು: 73



ಮೋಟಾರು ವಾಹನ ಅಪಘಾತ ಪರಿಹಾರ ಪ್ರಕರಣಗಳು: 53

ಇತರೆ ಎಕ್ಸಿಕ್ಯೂಷನ್ ಪ್ರಕರಣಗಳು: 52

ಬ್ಯಾಂಕ್ ದಾವೆಗಳು: 38

ಇತರೆ ಸಿವಿಲ್ ಪ್ರಕರಣಗಳು: 20

ಪಾಲು ವಿಭಾಗ ದಾವೆಗಳು: 17

ನಿರ್ದಿಷ್ಟ ಪರಿಹಾರದ ದಾವೆಗಳು: 12

ಕೌಟುಂಬಿಕ ಪ್ರಕರಣಗಳು: 11

ಹಣ ವಸೂಲಾತಿ ದಾವೆಗಳು: 10

ವಾಣಿಜ್ಯ ದಾವೆಗಳು: 08

ಎಂ.ವಿ.ಸಿ. ಅಮಲ್‌ಜಾರಿ ಪ್ರಕರಣಗಳು: 05

ನೌಕರರ ಪರಿಹಾರ ಪ್ರಕರಣಗಳು: 02

ಎಫ್.ಡಿ.ಪಿ. ಪ್ರಕರಣಗಳು: 02

*ವ್ಯಾಜ್ಯ ಪೂರ್ವ ಪ್ರಕರಣಗಳಿಂದ 10.45 ಕೋಟಿ ರೂ. ಜಮೆ:*

ವ್ಯಾಜ್ಯ ಪೂರ್ವ (ಪ್ರಿ-ಲಿಟಿಗೇಷನ್) ಹಂತದಲ್ಲಿದ್ದ ಬರೋಬ್ಬರಿ 66,959 ಪ್ರಕರಣಗಳು ಇತ್ಯರ್ಥಗೊಂಡಿದ್ದು, ಇವುಗಳಿಂದ ಒಟ್ಟು 10,45,22,074/ (10.45 ಕೋಟಿ) ರೂಪಾಯಿಗಳು ವಿವಿಧ ಬ್ಯಾಂಕ್ ಹಾಗೂ ಸರ್ಕಾರಿ ಇಲಾಖೆಗಳ ಖಜಾನೆಗೆ ಜಮೆಯಾಗಿವೆ.

*ಮತ್ತೆ ಒಂದಾದ 5 ದಂಪತಿಗಳು:*

ವಿಚ್ಛೇದನ ಹಾಗೂ ವೈವಾಹಿಕ ಕಲಹದಂತಹ 5 ಕೌಟುಂಬಿಕ ಸಮಸ್ಯೆಗಳ ಪ್ರಕರಣಗಳಲ್ಲಿ ನ್ಯಾಯಾಧೀಶರು ನಡೆಸಿದ ರಾಜಿ ಸಂಧಾನ ಫಲಪ್ರದವಾಗಿದ್ದು, ಐದು ಜೋಡಿಗಳು ಮನಸ್ತಾಪ ಮರೆತು ಮತ್ತೆ ಜೊತೆಯಾಗಿ ಜೀವನ ನಡೆಸಲು ಸಮ್ಮತಿಸಿ ಒಂದಾಗಿವೆ.

ಈ ಅದಾಲತ್‌ನ ಯಶಸ್ಸಿಗೆ ಶ್ರಮಿಸಿದ ನ್ಯಾಯಾಧೀಶರು, ವಕೀಲರು, ಕಕ್ಷಿದಾರರು, ಪೊಲೀಸ್ ಸಿಬ್ಬಂದಿ ಹಾಗೂ ವಿವಿಧ ಇಲಾಖೆಯ ಅಧಿಕಾರಿಗಳಿಗೆ ಬಳ್ಳಾರಿ ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ಸಿದ್ಧಲಿಂಗ ಪ್ರಭು ಅವರು ಅಭಿನಂದನೆ ತಿಳಿಸಿದ್ದಾರೆ.

**ಚಿನಿವಾರಪೇಟೆ** ಮುಂಬೈ,: ಸೆಪ್ಟೆಂಬರ್ 23- ಚಿನ್ನ: ಅಪರಂಜಿ 10 ಗ್ರಾಂ ರೂ. 1,60,090 22 ಕ್ಯಾರೆಟ್: 10 ಗ್ರಾಂ ರೂ. 1,46,780 ಬೆಳ್ಳಿ: 1 ಕೆ.ಜಿ. ರೂ. 2,90,000

# ಕಲ್ಯಾಣ ಕರ್ನಾಟಕದಲ್ಲಿ ಎಎಸ್‌ಎಂ ಕಾಲೇಜಿನಿಂದ ಗುಣಮಟ್ಟದ ಶಿಕ್ಷಣ: ಸೋಮಶೇಖರ ರೆಡ್ಡಿ





(ಸಂಜೆವಾಣಿ ಪ್ರತಿನಿಧಿಯಿಂದ)

ಬಳ್ಳಾರಿ, ಸೆ.23; ವೀರಶೈವ ವಿದ್ಯಾವರ್ಧಕ ಸಂಘವು ಬಳ್ಳಾರಿಯ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಯಾಗಿದ್ದು, 45ಕ್ಕೂ ಹೆಚ್ಚು ಶಿಕ್ಷಣ ಸಂಸ್ಥೆಗಳನ್ನು ಹೊಂದಿದೆ. ಈ ಮಹಿಳಾ ಮಹಾವಿದ್ಯಾಲಯವು

ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಗುಣಮಟ್ಟದ ಶಿಕ್ಷಣ ನೀಡುವ ಪ್ರಮುಖ ಸಂಸ್ಥೆಯಾಗಿದೆ ಎಂದು ನಗರದ ಮಾಜಿ ಶಾಸಕ ಗಾಲಿ ಸೋಮಶೇಖರ ರೆಡ್ಡಿ ಹೇಳಿದರು.

ಅವರು ನಿನ್ನೆ ಅಲ್ಲಂ ಸುಮಂಗಳಮ್ಮ ಸ್ಮಾರಕ ಮಹಿಳಾ ಮಹಾವಿದ್ಯಾಲಯದ ಸುವರ್ಣ ಮಹೋತ್ಸವದ ಎರಡನೇ ದಿನದ 'ಗುರು ವಂದನಾ' ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡುತ್ತಿದ್ದರು. ಹೆಣ್ಣು ಮಕ್ಕಳಿ ಉನ್ನತ ಶಿಕ್ಷಣ ಪಡೆಯಬೇಕೆಂಬ ಹಂಬಲ ಹೊಂದಿದ್ದಾಗ ಹೆಣ್ಣು ಮಕ್ಕಳ ಪ್ರತ್ಯೇಕ ಕಾಲೇಜಿಗಾಗಿ ದೂರದ ನಗರಗಳಿಗೆ ತೆರಳಬೇಕಾದ ಪರಿಸ್ಥಿತಿಯಲ್ಲಿ ಕಳೆದ ಐದು ದಶಕಗಳ ಹಿಂದೆಯೇ ಇಲ್ಲಿ ಮಹಿಳಾ ಕಾಲೇಜು ಆರಂಭಿಸಿ ಈ ಭಾಗದ ಹೆಣ್ಣು ಮಕ್ಕಳನ್ನು ಪದವೀಧರರನ್ನಾಗಿ ಮಾಡಿದ ಕೀರ್ತಿ ವೀ.ವಿ.ಸಂಘಕ್ಕೆ ಸೇರುತ್ತದೆಂದರು.

ಮರಿ ಕೊಟ್ಟೂರು ಸ್ವಾಮೀಜಿ ಎರಡನೇ ದಿನದ ಸಮಾರಂಭವನ್ನು ಉದ್ಘಾಟಿಸಿ, ಶಿಕ್ಷಣವು ಜೀವನವನ್ನು ಸಾರ್ಥಕಗೊಳಿಸುವ ಪ್ರಮುಖ ಸಾಧನವಾಗಿದ್ದು, ಮಹಿಳಾ ಶಿಕ್ಷಣಕ್ಕೆ ಅಲ್ಲಂ ಸುಮಂಗಳಮ್ಮ ಅವರು ನೀಡಿದ ಕೊಡುಗೆ ಶ್ಲಾಘನೀಯವಾಗಿದೆಂದರು. ವೀರಶೈವ ವಿದ್ಯಾವರ್ಧಕ ಸಂಘವು ಇನ್ನಷ್ಟು ಪ್ರಗತಿ ಸಾಧಿಸಲಿ ಹಾಗೂ ವಿದ್ಯಾರ್ಥಿಗಳಿಗೆ ಉತ್ತಮ ಆರೋಗ್ಯ ಮತ್ತು ಗುಣಮಟ್ಟದ ಶಿಕ್ಷಣ ದೊರೆಯಲಿ ಎಂದು ಆಶಿಸಿ. ಪಿ. ಗುರುಬಸಪ್ಪ ಸಂಘದ ಶೈಕ್ಷಣಿಕ ಸೇವೆಗೆ ಗೌರವ ಸೂಚಿಸುವ ನಿಟ್ಟಿನಲ್ಲಿ 18 ಎಕರೆ ಭೂಮಿಯನ್ನು ದಾನ ಮಾಡಿರುವುದು ಸ್ಮರಣೀಯ ಎಂದರು.

ಸಂಘ ಖಜಾಂಚಿ ಬೈಲುವದ್ದಿಗೇರಿ ಯರಿಸ್ವಾಮಿ ಪ್ರಾಸ್ತಾವಿಕವಾಗಿ ಮಾತನಾಡಿ, ಸಂಘದ ಇತಿಹಾಸ, ಎ.ಎಸ್.ಎಂ. ಮಹಿಳಾ ಮಹಾವಿದ್ಯಾಲಯದ ಸ್ಥಾಪನೆ ಮತ್ತು ಬೆಳವಣಿಗೆ ಹಾಗೂ ಗುರು ವಂದನಾ ಕಾರ್ಯಕ್ರಮದ ಮಹತ್ವವನ್ನು ವಿವರಿಸಿದರು.

ಕರ್ನಾಟಕ ಸಾಹಿತ್ಯ ಅಕಾಡೆಮಿಯ ಮಾಜಿ ಸದಸ್ಯ ಡಾ. ಮೈತ್ರೇಯಿಣಿ ಗಡಿಗೆಪ್ಪಗೌಡರ್ ಮಾತನಾಡಿ, ವೀರಶೈವ ವಿದ್ಯಾವರ್ಧಕ ಸಂಘವು ಶೈಕ್ಷಣಿಕ ಕ್ಷೇತ್ರದಲ್ಲಿ ಬಳ್ಳಾರಿಯ ಇತಿಹಾಸದಲ್ಲಿ ಮಹತ್ವದ ಸ್ಥಾನ ಪಡೆದಿದೆ. ಅಲ್ಲಂ ಸುಮಂಗಳನ್ನು ಅವರು 1969ರಲ್ಲಿ ಮಹಿಳಾ ಶಿಕ್ಷಣ ಮತ್ತು ಸಬಲೀಕರಣಕ್ಕೆ ಭದ್ರ ಬುನಾದಿ ಹಾಕಿದ್ದಾರೆ. ವಿದ್ಯಾರ್ಥಿಗಳು 21ನೇ ಶತಮಾನದ ಸವಾಲುಗಳನ್ನು ಎದುರಿಸಲು ಶಿಕ್ಷಣವನ್ನು ಪ್ರಮುಖ ಸಾಧನವನ್ನಾಗಿ ಬಳಸಿಕೊಳ್ಳಬೇಕು. ಮಹಿಳೆಯರು ಸ್ವಾವಲಂಬಿಗಳಾಗಿ ಆತ್ಮಸ್ಥೈರ್ಯದಿಂದ ಬದುಕಬೇಕೆಂದರು.

ಅಧ್ಯಕ್ಷತೆ ವಹಿಸಿದ್ದ ನಿವೃತ್ತ ಪ್ರಾಂಶುಪಾಲ ಪಿ. ಗುರುಬಸಪ್ಪ, ವೀರಶೈವ ವಿದ್ಯಾವರ್ಧಕ ಸಂಘವು ಶಿಕ್ಷಕ ವೃತ್ತಿಯ ಮೂಲಕ ತಮ್ಮ ಜೀವನಕ್ಕೆ ದಾರಿ ತೋರಿಸಿದೆ. ಶಿಕ್ಷಕ ವೃತ್ತಿ ಅತ್ಯಂತ ಶ್ರೇಷ್ಠ ವೃತ್ತಿಗಳಲ್ಲಿ ಒಂದಾಗಿದ್ದು ಶಿಕ್ಷಕರು ನಿಷ್ಠೆಯಿಂದ ಕರ್ತವ್ಯ ನಿರ್ವಹಿಸಿ ಸಂಸ್ಥೆಯ ಪ್ರಗತಿಗೆ ಶ್ರಮಿಸಬೇಕು.ವಿದ್ಯಾರ್ಥಿಗಳು ಕಷ್ಟಪಟ್ಟು ಅಧ್ಯಯನ ಮಾಡಿ ಸಮಾಜ ಮತ್ತು ರಾಷ್ಟ್ರದ ಅಭಿವೃದ್ಧಿಗೆ ಕೊಡುಗೆ ನೀಡಬೇಕೆಂದರು.

ಈ ವೇಳೆ ಕಾಲೇಜಿನ ನಿವೃತ್ತ ಪ್ರಾಂಶುಪಾಲರು, ಉಪನ್ಯಾಸಕರು ಹಾಗೂ ಬೋಧಕೇತರ ಸಿಬ್ಬಂದಿಯನ್ನು ಸನ್ಮಾನಿಸಿ ಗೌರವಿಸಲಾಯಿತು.

ಕಲ್ಯಾಣ ಮಠದ ಶ್ರೀಗಳು, ನಂದಿಪುರ ಮಠದ ಮಹೇಶ್ವರ ಸ್ವಾಮೀಜಿ, ಪದವಿಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಹನುಮಂತ ರಾವ್ ಎಂ.ವಿ. ಇದ್ದರು.ಕಾಲೇಜಿನ ಪ್ರಾಂಶುಪಾಲ ಡಾ. ದೂಪಂ ಸತೀಶ್ ಸ್ವಾಗತಿಸಿದರು. ಉಪನ್ಯಾಸಕಿ ಗಾಯತ್ರಿ ಕಾರ್ಯಕ್ರಮ ನಿರ್ವಹಿಸಿದರು.

# ನಾಳೆ ನಗರಕ್ಕೆ ಎಸ್‌ಐಆರ್ ಪ್ರಕ್ರಿಯೆ ವಿರೋಧದ ಪ್ರಕಾಶ್‌ರಾಜ್ ತಂಡ



(ಸಂಜೆವಾಣಿ ಪ್ರತಿನಿಧಿಯಿಂದ)

ಬಳ್ಳಾರಿ, ಸೆ.23: ಪ್ರಜಾತಾಂತ್ರಿಕ ವಿರೋಧಿಯಾಗಿ ನಡೆಯುತ್ತಿರುವುದನ್ನು ವಿರೋಧಿಸುತ್ತಿದೆ. ಪ್ರಕಾಶ್ ರಾಜ್, ವೀರಸಂಗಯ್ಯ ಸೇರಿದಂತೆ 15 ಜನರ ತಂಡ ಎಸ್ ಐ ಆರ್ ನಿಂದ ವಂಚಿತರಾದವರ ಬಗ್ಗೆ ಜಾಗೃತಗೊಳಿಸಲು ನಿನ್ನೆಯಿಂದ ಪ್ರವಾಸ ನಡೆಸಿದೆ. ಸೆ. 24 ರಂದು ಬಳ್ಳಾರಿಗೆ ಈ ತಂಡ ಬರಲಿದೆ.

ಎಸ್ ಐ ಆರ್ ಪ್ರಕ್ರಿಯೆ ಸರಿಯಾದ ರೀತಿಯಲ್ಲಿ ನಡೆಯುತ್ತಿಲ್ಲ. ಅರ್ಹ ಮತದಾರರನ್ನು ಹೊರಗಿಡುವ ಕೆಲಸ ಆಗುತ್ತಿದೆ. ಅದಕ್ಕಾಗಿ ಈ ತಂಡ ನಗರಕ್ಕೆ ಸೆ 24 ರಂದು ಸಂಜೆ 5 ಕ್ಕೆ ಆಗಮಿಸಲಿದೆ.

ಈ ತಿಂಗಳ 30 ರಂದು ಈ ಪ್ರಕ್ರಿಯನ್ನು ಒಪ್ಪಬಾರದೆಂದು ರಾಜ್ಯ ಸರ್ಕಾರ ಮತ್ತು ಚುನಾವಣಾ ಆಯೋಗಕ್ಕೆ ಮನವಿ ಸಲ್ಲಿಸಲಿದೆ ಜೊತೆಗೆ ಸುಪ್ರಿಂ ಕೋರ್ಟ್ ಮೊರೆ ಹೋಗಲಿದೆಂದು ಎದ್ದೇಳು ಕರ್ನಾಟಕದ ಮುಖಂಡ ಹೆಚ್.ಸಿದ್ದಣ್ಣ ಹೇಳಿದರು.

ಮುಂಬರುವ ದಿನಗಳಲ್ಲಿ ನಾವು ಪ್ರತಿ ಬೂತ್ ಮನೆ, ಮನೆಗೆ ಹೋಗಿ ಪ್ರಕ್ರಿಯೆಯಿಂದ ಹೊರಗುಳಿದವರನ್ನು ಭೇಟಿ ಮಾಡಿ ಸೇರಿಸುವ ಕೆಲಸ ಮಾಡಲಿದೆಂದರು.

ಸುದ್ದಿಗೋಷ್ಠಿಯಲ್ಲಿ ಮಾಧವರರೆಡ್ಡಿ, ಪರ್ವಿನ್ ಬಾನು ಮೊದಲಾದವರು ಇದ್ದರು.

# ಸಕ್ಕರೆ ಕರಡೀಶ ಸಹಕಾರ ಸಂಘಕ್ಕೆ 189 ಲಕ್ಷ ರೂ ಲಾಭ



(ಸಂಜೆವಾಣಿ ಪ್ರತಿನಿಧಿಯಿಂದ)

ಬಳ್ಳಾರಿ, ಸೆ.23: ನಗರದ ಬಸವ ಭವನದಲ್ಲಿ ಶ್ರೀ ಶರಣ ಸಕ್ಕರೆ ಕರಡೀಶ ಸೌಹಾರ್ದ ಪತ್ತಿನಸಹಕಾರಿ ಸಂಘದ. 10 ನೇ ವಾರ್ಷಿಕ ಮಹಾ ಸಭೆ ನಡೆಯಿತು.

ಸಂಘದ ಅಧ್ಯಕ್ಷ ಕಲ್ಗುಡಿ ಮಂಜುನಾಥ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಸಂಘದ ಉಪಾಧ್ಯಕ್ಷ ಟೆಂಗಿನಕಾಯಿ ಮಹಾಂತೇಶ್, ನಿರ್ದೇಶಕರುಗಳಾದ ಹಾವಿನಾಳ್ ಬಸವರಾಜ್, ಕೇಣಿ ಬಸಪ್ಪ, ಬೈಲುವದ್ದಿಗೇರಿ ಎರ್ರಿಸ್ವಾಮಿ, ಜಿ.ವೀರೇಶಪ್ಪ, ಹೋತೂರು ಹೇಮಾದ್ರಿ, ಬಾಡದ ಪ್ರಕಾಶ್, ಕೆ.ಎಂ.ಚನ್ನರಾಮೇಶ್ವರ, ಶಿವರಮೇಶ್, ವಂಟೆನಾಗರಾಜ್, ಕಾರ್ಯನಿರತ ನಿರ್ದೇಶಕರುಗಳಾದ ಗಾಳಿ ರಾಜಶೇಖರ, ಮುಂಡವಾಡ ರಮೇಶ್, ನಾಮನಿರ್ದೇಶಕರಾದ ಜಾನೆಕುಂಟೆ ತಿಪ್ಪೇರುದ್ರಪ್ಪ, ಶಿಡಗಿನಮೊಳೆ ಬಸವರಾಜ್ ಪಾಲ್ಗೊಂಡಿದ್ದರು.

ಈ ವೇಳೆ ಮಾತನಾಡಿದ ಕಲ್ಗುಡಿ ಮಂಜುನಾಥ, ನಮ್ಮ ಸಂಘವು 2025-26. ನೇ ಸಾಲಿನಲ್ಲಿ 189.40 ಲಕ್ಷ ರೂ ಲಾಭಗಳಿಸಿದ್ದು. ಷೇರುದಾರರಿಗೆ ಶೇ.14.25 ಲಾಭಾಂಶ ನೀಡುತ್ತಿದೆ.

ಷೇರು ಬಂಡವಾಳ 568.28 ಲಕ್ಷ ರೂ, ಠೇವಣಿ5323.90 ಲಕ್ಷ ರೂ ಹಾಗು ಸಾಲ ಮತ್ತು ಮುಂಗಡ 4625.34 ಲಕ್ಷ ರೂಗಳನ್ನು ಹೊಂದಿದೆ ಎಂದು ತಿಳಿಸಿದರು.

ವರದಿ ಮಂಡನೆ ಸಿಇಓ ವೈ ಶಂಭುಲಿಂಗಪ್ಪ, ಸೌಹಾರ್ದ ಸಂಯುಕ್ತ ಸಹಕಾರಿಯ ಜಿಲ್ಲಾ ಸಂಯೋಜಕ ವೀರೇಶೆಟ್ಟಿ ಸೌಹಾರ್ದ ಸಹಕಾರ ಸಂಘದ ಬಗ್ಗೆ ಉಪನ್ಯಾಸ ನೀಡಿದರು.

ಕರಡಕಲ್ ವೀರೇಶ್ ಕಾರ್ಯಕ್ರಮ ನಿರೂಪಿಸಿದರು, ಪ್ರಾರ್ಥನೆ ಪವಿತ್ರ ಅವರಿಂದ ನಡೆಯಿತು.



ಬಳ್ಳಾರಿ: ಸೆ.23(ಸಂಜೆವಾಣಿ) ನಗರದ ಗವಿಯಪ್ಪ (ಮೋತಿ) ವೃತ್ತದ ಬಳಿ ಮಳೆ ಬಂದು ನೀರು ನಿಂತಿದೆ. ಮಳೆ ಬಂದಾಗಲೆಲ್ಲ ಇದೇ ಪರಿಸ್ಥಿತಿ. ಈ ನೀರು ಹೋಗಲು ಸೂಕ್ತ ಚರಂಡಿ ಸಂಪರ್ಕ ಮಾಡಲು ಸಾರ್ವಜನಿಕರು ಆಗ್ರಹಿಸಿದ್ದಾರೆ.

# ಪೌರ ಕಾರ್ಮಿಕರ ದಿನಾಚರಣೆ

## ಅರ್ಹ ಪೌರ ಕಾರ್ಮಿಕರಿಗೆಲ್ಲ ಉಚಿತ ನಿವೇಶನ : ನಾಗೇಂದ್ರ ಪ್ರಸಾದ್



(ಸಂಜೆವಾಣಿ ಪ್ರತಿನಿಧಿಯಿಂದ)

ಬಳ್ಳಾರಿಸೆ.23: ನಿವೇಶನ ಅಗತ್ಯ ಇರುವ ಎಲ್ಲಾ ಪೌರ ಕಾರ್ಮಿಕರಿಗೆ ನಿವೇಶನ ನೀಡಲು ಸರ್ಕಾರ ಸೂಚಿಸಿದೆ. ಬಳ್ಳಾರಿ ನಗರದಲ್ಲಿ ಸರ್ಕಾರಿ ಜಮೀನು ಒತ್ತುವರಿ ಮಾಡಿರುವುದನ್ನು ತೆರವುಗೊಳಿಸಿರುವ ಕಡೆ ನಿವೇಶನ ನೀಡಲಿದೆ. ಎಂದು ಜಿಲ್ಲಾಧಿಕಾರಿ ಡಾ.ಕೆ.ನಾಗೇಂದ್ರ ಪ್ರಸಾದ್ ಹೇಳಿದರು.

ಪೌರ ಕಾರ್ಮಿಕರ ಹಕ್ಕುಗಳ ರಕ್ಷಣೆಗಾಗಿ ಐಪಿಡಿ ಸಾಲಪ್ಪನವರು ಸರ್ಕಾರಕ್ಕೆ ವರದಿ ನೀಡಿದ ದಿನವನ್ನು ಪೌರ ಕಾರ್ಮಿಕರ ದಿನಾಚರಣೆಯನ್ನಾಗಿ ಆಚರಿಸುತ್ತಿದೆ

ಈ ನಿಟ್ಟನಲ್ಲಿ ಬಳ್ಳಾರಿಯ ವಾಲ್ಮೀಕಿ ಭವನದಲ್ಲಿ ಇಂದು ಹಮ್ಮಿಕೊಂಡಿದ್ದ ಪೌರ ಕಾರ್ಮಿಕ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು. ಪಾಲಿಕೆಗೆ ಒಳ್ಳೆಯ ಅಥಾವ ಕೆಟ್ಟ ಹೆಸರು ಬರುವುದು ಸ್ವಚ್ಚತಾ ಕೆಲಸದಿಂದ ಈ ಕೆಲಸ ಮಾಡುವ ಪೌರ ಕಾರ್ಮಿಕರಿಗೆ ಸರ್ಕಾರ ನೀಡಿರುವ ಎಲ್ಲಾ ಸೌಲಭ್ಯಗಳನ್ನು ಸಕಾಲದಲ್ಲಿ ಪಾಲಿಕೆ ಒದಗಿಸಬೇಕು ಎಂದರು.

ಜಿಪಂ ಸಿಇಓ ಮಹಮ್ಮದ್ ಹಾರೀಸ್ ಸುಮೇರ್ ಮಾತನಾಡಿ, ಸ್ವಚ್ಚತೆ ಎನ್ನುವುದು ಕೇವಲ ಪೌರ ಕಾರ್ಮಿಕರ ಜಾವಾಬ್ದಾರಿಯಲ್ಲ ಸಾರ್ವಜನಿಕರದ್ದು ಆಗಿದೆ. ಪೌರ ಕಾರ್ಮಿಕರ ಒಳಿತಿಗೆ ಜಿಲ್ಲಾಆಡಳಿತ ಸದಾ ಬೆನ್ನೆಲುವಾಗಿ ಇರುತ್ತದೆಂದು ಹೇಳಿದರು.

ಪೌರ ಕಾಮಿಕರ ಸಂಖ್ಯೆ ಕೊರತೆ ಇದೆ. ಆರು ವರ್ಷವಾದರೂ ಹೆಚ್ಚಿನ ಕಾರ್ಮಿಕರನ್ನು ತೆಗೆದುಕೊಂಡಿಲ್ಲ. ಇದರಿಂದ ಹೆಚ್ಚಿನಕೆಲಸ ಮಾಡಬೇಕಿದೆ. ಅದಕ್ಕಾಗಿ ಕೂಡಲೇ ಖಾಲಿ ಇರುವ ಪೌರ ಕಾರ್ಮುಕ ಹುದ್ದೆಗಳನ್ನು ಭರ್ತಿ ಮಾಡಿ ಎಂದು ಸ್ಥಾಯಿಸಮಿತಿ ಅಧ್ಯಕ್ಷ ಕೆ.ಹನುಂಮತಪ್ಪ ಆಗ್ರಹಿಸಿದರು.

ಮಾಜಿ ಮೇಯರ್, ಎಂ.ರಾಜೇಶ್ವರಿ ಸುಬ್ಬರಾಯ್ಡು ಅವರು ಪೌರ ಕಾರ್ಮಿಕರು ಖಡ್ಡಾಯವಾಗಿ ಸ್ವಚ್ಚತಾ ವೇಳೆ ಗ್ಲೌಸ್ ಬಳಸಿ ಎಂದು ಮನವಿ ಮಾಡಿ, ಪೌರ ಕಾರ್ಮಿಕರಿಗೆ ನೀಡುವ ಉಪಹಾರದ ಗುಣಮಟ್ಟ ಸರಿಯಿಲ್ಲ ಸರಿಪಡಸಬೇಕೆಂದರು.





ಸದಸ್ಯ ಸುರೇಖ ಮಲ್ಲನಗೌಡ ಮಾತನಾಡಿ, ಇಂದು ಪೌರ ಕಾರ್ಮಿಕರು ಕಲರ್ ಪುಲ್ ಆಗಿ ಬಂದಿರುವುದಕ್ಕೆ ಖುಷಿ ವ್ಯಕ್ತಪಡಿಸಿ. ವಂದೇ ಮಾತರಂ ಗೀತೆಯನ್ನು ಕೇವಲ ಎರಡು ಚರಣ ಹಾಡಿದ್ದಕ್ಕೆ ಆಕ್ಷೇಪ ವ್ಯಕ್ತಪಡಿಸಿ ಆರು ಚರಣಗಳನ್ನು ಹಾಡಬೇಕು. ಇದು ಸ್ವಾತಂತ್ರ್ಯದ ಹೋರಾಟಕ್ಕೆ ರಚನೆಗೊಂಡ ಗೀತೆ ಎಂದರು.

ಸದಸ್ಯ ಮಿಂಚು ಶ್ರೀನಿವಾಸುಲು ಎ 'ಾತನಾಡಿ, ಅಗತ್ಯ ಇರುವಷ್ಟು ಕಸ ಸಂಗ್ರಹ ವಾಹನ ಮತ್ತು ಕಾರ್ಮಿಕರ ನೇಮಕ ಆಗಬೇಕು ಎಂದು ಪಾಲಿಕೆ ಆಯುಕ್ತರಲ್ಲಿ ಮನವಿ ಮಾಡಿದರು.

ಸದಸ್ಯ ಪಿ.ವಿವೇಕ್ ಮಾತನಾಡಿ, ದೇಶದ ಭದ್ರತೆಗೆ ಸೈನಿಕರು ಹೇಗೆ. ಹಾಗೆಯೇ ಸ್ವಚ್ಚತೆ ಮಾಡುವ ಮೂಲಕ ಸಾರ್ವಜನಿಕರಿಗೆ ರೋಗರುಜಿನ ಬರದಂತೆ ಮಾಡುವ ಆರೋಗ್ಯದ ಸೈನಿಕರು ಪೌರ ಕಾರ್ಮಿಕರು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪಾಲಿಕೆ ಆಯುಕ್ತ ಪಿ.ಎಸ್.ಮಂಜುನಾಥ, ಹಲವು ವರ್ಷಗಳಿಂದ ಬಳ್ಳಾರಿ ಮಹಾನಗರ ಪಾಲಿಕೆಯಲ್ಲಿ ಗುತ್ತಿಗೆ ಆಧಾರದಲ್ಲಿ ದುಡಿಯುತ್ತಿರುವ ಕಾರ್ಮಿಕರನ್ನು ಖಾಯಂಮಾಡುವ ಕಾರ್ಯ ನಡೆದಿದೆ 495 ಖಾಯಂ ಪೌರಕಾರ್ಮಿಕರಿದ್ದು, ಇವರಲ್ಲಿ 121 ಜನ ಪೌರಕಾರ್ಮಿಕರನ್ನು ಖಾಯಂ ಮಾಡಲಾಗಿದೆ. 58 ಜನ ಪ್ರಸ್ತುತ ನೇರಪಾವತಿಯಡಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಇವರಲ್ಲಿ 20 ಜನರನ್ನು ಖಾಯಂ ಮಾಡುವ ಪ್ರಕ್ರಿಯೆ ನಡೆದಿದೆ. ನೇರ ಪಾವತಿಯಡಿ ಇನ್ನೂ 300 ಪೌರ ಕಾರ್ಮಿಕರನ್ನು ನೇಮಕ ಮಾಡಿಕೊಳ್ಳುವ ಪ್ರಕ್ರಿಯೆ ನಡೆದಿದೆಂದರು.

ಖಾಯಂ ಹಾಗೂ ನೇರಪಾವತಿ ಪೌರಕಾರ್ಮಿಕರಿಗೆ ಪ್ರತಿ ತಿಂಗಳು ಒಬ್ಬರಿಗೆ ರೂ.2000 ರಂತೆ ಸಂಕಷ್ಟ ಭತ್ಯೆಯನ್ನು ನೀಡುತ್ತಿದೆ. ಖಾಯಂ ಪೌರಕಾರ್ಮಿಕರಿಗೆ ಪೌರಕಾರ್ಮಿಕ ದಿನಾಚರಣೆ ಪ್ರಯುಕ್ತ ರೂ.7000 ವಿಶೇಷ ಭತ್ಯೆಯನ್ನು.ಸಾರ್ವತ್ರಿಕ ರಜಾ ದಿನಗಳಲ್ಲಿ ಕಾರ್ಯನಿರ್ವಹಿಸುವ ಕಾರಣ ಪ್ರತಿ ವರ್ಷ 21 ದಿನಗಳ ವಿಶೇಷ ರಜಾ ವೇತನವನ್ನು ಖಾಯಂ ಪೌರಕಾರ್ಮಿಕರಿಗೆ ನೀಡಲಾಗುತ್ತಿದೆಂದು ತಿಳಿಸಿದರು.

ದಿನನಿತ್ಯದ ಸಮವಸ್ತ್ರ, ಅಸ್ವಚ್ಚತೆಯನ್ನು ಸ್ವಚ್ಚಗೊಳಿಸುವ ಪರಿಸರದಿಂದ ದೂರವಾಗಿ, ಸಂತಸದಿಂದ ಕಳೆಯುವ ದಿನಾಚರಣೆಗೆ ಬಣ್ಣ ಬಣ್ಣದ ವಸ್ತ್ರಗಳಿಂದ ಬಂದ ಪೌರ ಕಾರ್ಮಿಕರ ಮೊಗದಲ್ಲಿ ಹೊಸ ಕಳೆ ಇತ್ತು.

ಪಾಲಿಕೆಯ ಉಪಮೇಯರ್ ಮೊಬಿನಾ ಬೀ, ಸ್ಥಾಯಿ ಸಮಿತಿ ಅಧ್ಯಕ್ಷ, ಪಿ.ವಿವೇಕ್, ಸದಸ್ಯರಾದ ಎಂ.ರಾಮಾಂಜಿನಿ, ಚೇತನಾ ವೇಮಣ್ಣ, ಕಾಂಗ್ರೆಸ್ ಪಕ್ಷದ ಮುಖಂಡ ಶಿವರಾಜ್ ಹೆಗಡೆ, ಉಪ ಆಯುಕ್ತ ನಂದೀಶ್, ಪಾಲಿಕೆ ನೌಕರರ ಸಂಘದ ಅಧ್ಯಕ್ಷ ಗೋವಿಂದ ಬಾಬು, ಪೌರ ಕಾರ್ಮಿಕರ ಸಂಘದ ಅಧ್ಯಕ್ಷೆ ನಾಗರತ್ನ ಉಪ ಆಯುಕ್ತ ನಂದೀಶ್, ಮುಖ್ಯ ಲೆಕ್ಕಾಧಿಕಾರಿ ನಾಗರಾಜ ಮೊದಲಾದವರು ಇದ್ದರು.

# ಇನ್ನಾರೆಡ್ಡಿ ಕಾಲೋನಿಯ ಮನೆಯಲ್ಲಿ 20 ಲಕ್ಷ ಮೌಲ್ಯದ ಚಿನ್ನಾಭರಣ ಕಳವು



(ಸಂಜೆವಾಣಿ ಪ್ರತಿನಿಧಿಯಿಂದ)

ಬಳ್ಳಾರಿ, ಸೆ.23: ನಗರದ ಇನ್ನಾರೆಡ್ಡಿ ಕಾಲೋನಿಯಲ್ಲಿನ ಗುತ್ತುಗೆದಾರ ಶ್ರೀಧರ್ ಅವರ ಮನೆಯಲ್ಲಿ ಮೊನ್ನೆ ರಾತ್ರಿ ಮೂವರು ಕಳ್ಳರು ನುಗ್ಗಿ 20 ಲಕ್ಷ ಮೌಲ್ಯದ ಚಿನ್ನಾಭರಣ ದೋಚಿಕೊಂಡು ಹೋಗಿರುವ ಘಟನೆ ನಡೆದಿದ್ದು.ಕೌಲ್ ಬಜಾರ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಳ್ಳತನಕ್ಕೆ ಬಂದ ತಂಡದ ಚಲನವಲನ ಸಿಸಿಟಿವಿಯಲ್ಲಿ ಸೆರೆಯಾಗಿದೆ.ಕಿಟಿಕಿ ಸರಳು ತುಂಡರಿಸಿ ಮನೆ ಹೊಕ್ಕಿರುವ ಕಳ್ಳರು.ಕುಟುಂಬಸ್ಥರು ನಿದ್ರಿಸುತ್ತಿದ್ದ ಕೊಠಡಿ ಹೊರತುಪಡಿಸಿ ಇಡೀ ಮನೆ ಜಾಲಾಡಿದ್ದಾರೆ. 211 ಗ್ರಾಂ ಚಿನ್ನ ಹಾಗೂ 1,200 ಗ್ರಾಂ ಬೆಳ್ಳಿ ಆಭರಣ ಕದ್ದೊಯ್ದಿದ್ದಾರೆ. ಕಳ್ಳರು ಕ್ಲೋರೋಫಾರ್ಮ್ ಮಾದರಿಯ ರಾಸಾಯನಿಕ ಬಳಸಿ ಮಲಗಿದ್ದವರನ್ನು ಮಂಪರು ಮಾಡಿದ್ದಾರೆ ಎನ್ನಲಾಗ್ತಿದೆ. ಘಟನಾ ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸುಮಾನ್ ಪೆನ್ನೇಕರ್ ಭೇಟಿ ಪರಿಶೀಲನೆ ಮಾಡಿ ಕಳ್ಳರ ಪತ್ತೆ ಯತ್ನ ನಡೆಸಿದ್ದಾರಂತೆ

# ಕರ್ನಾಟಕ ಮುಕ್ತ ವಿವಿಯ ಬಳ್ಳಾರಿ ಪ್ರಾದೇಶಿಕ ಕೇಂದ್ರದಲ್ಲಿ ಪ್ರಾಯೋಗಿಕ ಪರೀಕ್ಷೆ:ಕುಲಪತಿ ಜ್ಞಾನ ಪ್ರಕಾಶ್



(ಸಂಜೆವಾಣಿ ಪ್ರತಿನಿಧಿಯಿಂದ)

ಬಳ್ಳಾರಿ, ಸೆ.23: ರಾಜ್ಯದ ದೂರ ಶಿಕ್ಷಣದ ಏಕೈಕ ವಿಶ್ವವಿದ್ಯಾಲಯು ಕರ್ನಾಟಕ ಮುಕ್ತ ವಿವಿ ಮಾತ್ರ ಆಗಿದೆ. ಬಳ್ಳಾರಿ ಸೇರಿದಂತೆ ರಾಜ್ಯದಲ್ಲಿ 38 ಪ್ರಾದೇಶಿಕ ಕೇಂದ್ರಗಳಿವೆ 70 ಪರೀಕ್ಷಾ ಕೇಂದ್ರಗಳನ್ನು ಹೊಂದಿದೆದೆ. ಬಳ್ಳಾರಿ ಪ್ರಾದೇಶಿಕ ಕೇಂದ್ರದಲ್ಲಿ ಸಧ್ಯ ಒಂದು ಸಾವಿರ ವಿದ್ಯಾರ್ಥಿಗಳು ನೋಂದಣಿ ಮಾಡಿಕೊಂಡಿದ್ದಾರೆ. ಇನ್ನು ಮುಂದೆ ಈ ಭಾಗದ ವಿದ್ಯಾರ್ಥಿಗಳು ಪ್ರಾಕ್ಟಿಕಲ್ ಪರೀಕ್ಷೆಗಳಿಗೆ ಮೈಸೂರಿಗೆ ಬರುವುದನ್ನು ತಪ್ಪಿಸಲು ಬಳ್ಳಾರಿ ಕೇಂದ್ರದಲ್ಲಿಯೇ ಪ್ರಾಕ್ಟಿಕಲ್ ಪರೀಕ್ಷೆ ನಡೆಸುವ ಉದ್ದೇಶಹೊಂದಿದೆ ಎಂದು ವಿವಿ ಕುಲಪತಿ ಎ.ಪಿ.ಜ್ಞಾನಪ್ರಕಾಶ್ ತಿಳಿಸಿದ್ದಾರೆ.

ಅವರು ಇಂದು ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಟಿ ನಡೆಸಿ ಈ ವಿಷಯ ತಿಳಿಸಿದರು.

ಏಕಕಾಲದಲ್ಲಿ ನಮ್ಮ ವಿವಿಯಲ್ಲಿ ಎರೆಡು ಕೋರ್ಸ್ ಗಳಲ್ಲಿ ಅಧ್ಯಯನ ಮಾಡುವ ಅವಕಾಶ ಇದೆ ಎಂದ ಅವರು.

ಅರ್ಹ ಅಲ್ಪ ಸಂಖ್ಯಾತ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾನಿಯ ಹಾಗು ಅಲ್ಪ ಸಂಖ್ಯಾತ ಕಲ್ಯಾಣ ಇಲಾಖೆಯ ಪರಿಶೀಲನೆ ಹಾಗೂ ಅನುಮೋದನೆಗೆ ಒಳಪಟ್ಟು 'ಅಲ್ಪ ಸಂಖ್ಯಾತ ಕಲ್ಯಾಣ ಇಲಾಖೆ ಸಹಯೋಗದಲ್ಲಿ ಯುಜಿ ,ಪಿಜಿ ಪದವಿ ಕೋರ್ಸ್ ಗಳಿಗೆ ಉಚಿತ ಶಿಕ್ಷಣ ಯೋಜನೆ' ಹೊಂದಿದೆ.

ತೃತೀಯ ಲಿಂಗದ ವಿದ್ಯಾರ್ಥಿಗಳಿಗೆ.

ಶೇಕಡ 50ಕ್ಕೂ ಹೆಚ್ಚಿನ ದೃಷ್ಟಿಹೀನ ವಿದ್ಯಾರ್ಥಿಗಳಿಗೆ,

ಕೋವಿಡ್-19ರ ಸಾಂಕ್ರಾಮಿಕ ರೋಗದಿಂದ ಮೃತರಾದ ತಂದೆ ಅಥವಾ ತಾಯಿಯ ಮಕ್ಕಳಿಗೆ ಉಚಿತ ಪ್ರವೇಶಾತಿ ನೀಡಲಾಗುತ್ತಿದೆಂದರು.


ಬಿ.ಪಿ.ಎಲ್. ಕಾರ್ಡ್ ಹೊಂದಿರುವ ಮಹಿಳಾ ವಿದ್ಯಾರ್ಥಿಗಳಿಗೆ.ಡಿಫೆನ್ಸ್ ಹಾಗೂ ಮಾಜಿ ಸೈನಿಕ ವಿದ್ಯಾರ್ಥಿಗಳಿಗೆ.ಆಟೋ/ಕ್ಯಾಬ್ ಚಾಲಕರು ಮತ್ತು ಅವರ ಪತಿ/ಪತ್ನಿ ಹಾಗೂ ಇಬ್ಬರು ಮಕ್ಕಳಿಗೆ. ಸಾರಿಗೆ ಸಂಸ್ಥೆಯ ಮಕ್ಕಳಿಗೆ ಶೇ 10 ರಷ್ಟು ಶುಲ್ಕರಿಯಾಯಿತಿನೀಡುತ್ತಿದೆಂದರು.

ಪ್ರತಿ ಜಿಲ್ಲೆಯಲ್ಲಿ ಪರೀಕ್ಷಾ ಕೇಂದ್ರ, ಪ್ರತಿ ತಾಲೂಕಿನಲ್ಲಿ ಕಲಿಕಾರ್ಥಿ ಸಹಾಯ ಕೇಂದ್ರಗಳ ಸ್ಥಾಪನೆ ಮಾಡಿದೆ.

ವಿದ್ಯಾರ್ಥಿಗಳು ಬಿಡುವಿನ ಸಮಯದಲ್ಲಿ ಆನ್ಲೈನ್ನಲ್ಲಿ ಅಭ್ಯಾಸ ಮಾಡಲು ಅನುಕೂಲವಾಗುವಂತೆ 'ಕರಾಮುವಿ ದೃಶ್ಯವಾಹಿನಿ' ಎಂಬ ಹೆಸರಿನ ಯೂಟ್ಯೂಬ್ ಚಾನೆಲ್ ಕಾರ್ಯನಿರ್ವಹಿಸುತ್ತಿದೆಂದರು.

ಅಂಕಪಟ್ಟಿಗಳು ಮತ್ತು ಪದವಿ ಪ್ರಮಾಣ ಪತ್ರವನ್ನು ವಿದ್ಯಾರ್ಥಿಗಳ ವಿಳಾಸಕ್ಕೆ ರಿಜಿಸ್ಟರ್ ಅಂಚೆಯ ಮೂಲಕ ರವಾನಿಸಲಾಗುವುದೆಂದು ತಿಳಿಸಿದರು.

ಸುದ್ದಿಗೋಷ್ಟಿಯಲ್ಲಿ ವಿವಿಯ ಡಾ.ಆನಂದಗೌಡ, ಅರುಣ್ ಕೆ.ಎಸ್., ಸುರೇಶ್, ಮೈತ್ರಿ ಮೊದಲಾದವರು ಇದ್ದರು.



ಬಳ್ಳಾರಿ ಸೆ.23: (ಸಂಜೆವಾಣಿ) ತಾಲೂಕಿನ ಕುಡತಿನಿಯಲ್ಲಿ ಬಡಿಗೇರು ಕಟ್ಟೆಯ ಹತ್ತಿರ ಪಲ್ಲೇದ ಪಂಪಾಪತೆಪ್ಪನವರ ಆವರಣದಲ್ಲಿ ಗಜಾನನ ಮಿತ್ರ ಮಂಡಳಿಯಿಂದ 15 ವರ್ಷದಿಂದ ಗಣೇಶ ಮೂರ್ತಿ ಪ್ರತಿಷ್ಟಾಪನೆ ಮಾಡುತ್ತಿದ್ದು ಈವರ್ಷ ಚೌತಿಯಿಂದ ನಿನ್ನೆ ವರೆಗೆ ಕೂಡಿಸಿ ವಿಸರ್ಜನೆ ಮಾಡಲಾಗಿದೆ. ದಿನನಿತ್ಯ ಪೂಜಾ, ಭಜನೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ಜೊತೆಗೆ ಪ್ರಸಾದ ವಿತರಣೆ ನಡೆಯಿತು. ಗಣೇಶನ ಲಡ್ಡು ಪ್ರಸಾದ ಹರಾಜು 50101 ಗೆ ಹಾಕಲಾಯ್ತು.

ಸಂಜೆವಾಣಿ

ಸಂಜೆವಾಣಿ ಪತ್ರಿಕೆಯಿಂದ ಪ್ರಕಟವಾಗುವ ದೀಪಾವಳಿ ವಿಶೇಷ ಸಂಚಿಕೆ 2026

ವಿಶೇಷ ಸಂಚಿಕೆಗೆ ಕತೆ, ಕವಿತೆ, ಲೇಖನಗಳನ್ನು ಆಹ್ವಾನಿಸಲಾಗಿದೆ. ಆಯ್ದ ಕತೆ, ಕವಿತೆ, ಲೇಖನಗಳನ್ನು ಸಂಜೆವಾಣಿ ವಿಶೇಷ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಲೇಖಕರು ತಮ್ಮ ಕತೆ-ಕವಿತೆ-ಲೇಖನಗಳನ್ನು bellary@sanjevani.com ಗೆ ಮೇಲ್ ಮಾಡಿ, ಅಥವಾ ಈ ವಾಟ್ಸಾಪ್ ನಂಬರ್‌ಗೆ 9845139131 Or 9241000283 ಕಳುಹಿಸಿ. ಕತೆ, ಕವಿತೆ, ಲೇಖನಗಳ ಕೊನೆಯಲ್ಲಿ ನಿಮ್ಮ ಹೆಸರು, ವಿಳಾಸ, ಸಂಪರ್ಕಿಸಬೇಕಾದ ನಂಬರ್ ಹಾಕಿ, ತಮ್ಮ ಬರಹಗಳನ್ನು ನಮಗೆ ಕಳಿಸಲು

ಕೊನೆಯ ದಿನಾಂಕ : 05.10.2026

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ :

9449871908

ಸಂಜೆ ವಾಣಿ
ಬುಧವಾರ, ಸೆಪ್ಟೆಂಬರ್ 23, 2026

# ವೈವಿಧ್ಯ



## ಇಸ್ರೇಲ್ ಐರ್ಲೆಂಡ್ ಫುಟ್‌ಬಾಲ್ ಪಂದ್ಯಕ್ಕೆ ವಿವಾದದ ಕಾವು
### ತಟಸ್ಥ ತಾಣದಲ್ಲಿ ಪಂದ್ಯ; ಐರಿಷ್ ಅಭಿಮಾನಿಗಳಿಗೆ ಪ್ರವೇಶವಿಲ್ಲ

ಡಬ್ಲಿನ್, ಸೆ.22: ಗಾಜಾ ಸಂಘರ್ಷದ ಹಿನ್ನೆಲೆಯಲ್ಲಿ ಇಸ್ರೇಲ್ ವಿರುದ್ಧದ ಪಂದ್ಯಗಳನ್ನು ಬಹಿಷ್ಕರಿಸಬೇಕೆಂಬ ಒತ್ತಡ ತೀವ್ರಗೊಂಡಿರುವ ನಡುವೆಯೇ, ಐರ್ಲೆಂಡ್ ಹಾಗೂ ಇಸ್ರೇಲ್ ನಡುವಿನ ಯುಇಎಫ್‌ಎ ನೇಷನ್ಸ್ ಲೀಗ್ ಪಂದ್ಯಗಳು ತಟಸ್ಥ ತಾಣಗಳಲ್ಲಿ ನಡೆಯಲಿವೆ. ಭದ್ರತಾ ಆತಂಕ, ಪ್ರತಿಭಟನೆಗಳು ಮತ್ತು ರಾಜಕೀಯ ವಿವಾದದಿಂದಾಗಿ ಸಾಮಾನ್ಯ ಅಂತಾರಾಷ್ಟ್ರೀಯ ಫುಟ್‌ಬಾಲ್ ಪಂದ್ಯವೊಂದು ಭಾರಿ ಚರ್ಚೆಗೆ ಗ್ರಾಸವಾಗಿದೆ.

ಸೆಪ್ಟೆಂಬರ್ 27ರಂದು ನಡೆಯಲಿರುವ 'ಅವೇ' ಪಂದ್ಯಕ್ಕೆ ಐರ್ಲೆಂಡ್ ತಂಡ ಹಂಗೇರಿಯ ಡೆಬ್ರೆಸೆನ್‌ನ ನಾಜಿರ್ದೇಯಿ ಕ್ರೀಡಾಂಗಣಕ್ಕೆ ತೆರಳಲಿದೆ. ಅಕ್ಟೋಬರ್ 4ರಂದು ಐರ್ಲೆಂಡ್‌ನ 'ಹೋಮ್' ಪಂದ್ಯವನ್ನು ಐರ್ಲೆಂಡ್‌ನಲ್ಲೇ ನಡೆಸದೆ ಸರ್ಬಿಯಾದ ಬಾಕಾ ಟೊಪೋಲಾದ ಟಿಎಸ್‌ಸಿ ಅರೇನಾದಲ್ಲಿ ಆಯೋಜಿಸಲಾಗಿದೆ. ಈ ಪಂದ್ಯ ಬಂದ್ ಬಾಗಿಲಿನ ಹಿಂದೆ ನಡೆಯಲಿದೆ.

**▸ ಪಂದ್ಯ ಬಹಿಷ್ಕರಿಸಲು ಒತ್ತಡ**

ಇಸ್ರೇಲ್‌ನ ಗಾಜಾ ಸೇನಾ ಕಾರ್ಯಾಚರಣೆಯನ್ನು ವಿರೋಧಿಸಿ ಪಂದ್ಯಗಳನ್ನು ಆಡಬಾರದು ಎಂದು ಐರ್ಲೆಂಡ್‌ನಲ್ಲಿ ಅಭಿಮಾನಿಗಳು, ಕ್ರೀಡಾಪಟುಗಳು ಹಾಗೂ ವಿವಿಧ ಸಂಘಟನೆಗಳು ಒತ್ತಾಯಿಸುತ್ತಿವೆ. ಜುಲೈನಲ್ಲಿ ನಡೆದ ಫುಟ್‌ಬಾಲ್ ಅಸೋಸಿಯೇಷನ್ ಆಫ್ ಐರ್ಲೆಂಡ್ (FAI) ವಿಶೇಷ ಸಾಮಾನ್ಯ ಸಭೆಯಲ್ಲಿ ಪಂದ್ಯಗಳನ್ನು ಆಡಲು 75 ಪ್ರತಿನಿಧಿಗಳು ಬೆಂಬಲಿಸಿದರೆ, 32 ಮಂದಿ ವಿರೋಧಿಸಿದ್ದರು.

ಪಂದ್ಯಗಳನ್ನು ಆಡದಿದ್ದರೆ ಯುಇಎಫ್‌ಎಯಿಂದ ಶಿಸ್ತು ಕ್ರಮ ಎದುರಾಗುವ ಸಾಧ್ಯತೆ ಮತ್ತು ಐರಿಷ್ ಫುಟ್‌ಬಾಲ್‌ಗೆ ಆರ್ಥಿಕ ಹಾಗೂ ಆಡಳಿತಾತ್ಮಕ ಪರಿಣಾಮ ಉಂಟಾಗಬಹುದೆಂಬ ಕಾರಣವನ್ನು ಈಂಖ ಮುಂದಿಟ್ಟಿದೆ. ಈಂಖ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡೇವಿಡ್ ಕೌರೆಲ್, ಐರ್ಲೆಂಡ್‌ನಲ್ಲಿ ಪಂದ್ಯಗಳನ್ನು ಆಡಿಸುವ ಕುರಿತು ಸಾರ್ವಜನಿಕರಲ್ಲಿ ಇರುವ ತೀವ್ರ ಭಾವನೆಗಳನ್ನು ಸಂಸ್ಥೆ ಅರ್ಥಮಾಡಿಕೊಂಡಿದೆ, ಆದರೆ ಯುಇಎಫ್‌ಎಯ ನಿಲುವಿನಿಂದ ಈಂಖ ಕಠಿಣ ಪರಿಸ್ಥಿತಿಯಲ್ಲಿದೆ ಎಂದು ಹೇಳಿದ್ದಾರೆ.

**▸ ಐರಿಷ್ ಅಭಿಮಾನಿಗಳಿಗೆ ಟಿಕೆಟ್ ಇಲ್ಲ**

ಎರಡೂ ಪಂದ್ಯಗಳಿಗೆ ಐರ್ಲೆಂಡ್ ಅಭಿಮಾನಿಗಳಿಗೆ ಯಾವುದೇ ಟಿಕೆಟ್ ಮಾರಾಟ ಮಾಡದಿರಲು ಈಂಖ ನಿರ್ಧರಿಸಿದೆ. ಸೆಪ್ಟೆಂಬರ್ 27ರ ಡೆಬ್ರೆಸೆನ್ ಪಂದ್ಯದಲ್ಲಿ ಇಸ್ರೇಲ್ ಅಭಿಮಾನಿಗಳಿಗೆ ಸೀಮಿತ ಸಂಖ್ಯೆಯಲ್ಲಿ ಪ್ರವೇಶ ಕಲ್ಪಿಸಲಾಗುತ್ತದೆ. ಅಕ್ಟೋಬರ್ 4ರ ಸರ್ಬಿಯಾ ಪಂದ್ಯ ಸಂಪೂರ್ಣ ಬಂದ್ ಬಾಗಿಲಿನ ಹಿಂದೆ ನಡೆಯಲಿದೆ. ಈಂಖ ಈ ಕ್ರಮಕ್ಕೆ ಕಾರ್ಯಾಚರಣೆ ಹಾಗೂ ಸುರಕ್ಷತಾ ಕಾರಣಗಳನ್ನು ಉಲ್ಲೇಖಿಸಿದೆ.

ಐರ್ಲೆಂಡ್‌ನ ಸಾರ್ವಜನಿಕ ಪ್ರಸಾರ ಸಂಸ್ಥೆ RTÉ ಕೂಡ ತನ್ನ ಸಾಮಾನ್ಯ ಕ್ರೀಡಾ ಪ್ರಸಾರವನ್ನು ಕಡಿತಗೊಳಿಸಿದೆ. ಜಾಹೀರಾತು ಅಥವಾ ಪ್ರಾಯೋಜಕತ್ವದ ಆದಾಯ ಪಡೆಯದೆ, ಒಪ್ಪಂದದಡಿ ಅಗತ್ಯವಿರುವ ಪ್ರಸಾರವನ್ನು ಮಾತ್ರ ನಡೆಸಲಿದೆ. ಸ್ಟುಡಿಯೊ ಕಾರ್ಯಕ್ರಮ, ಪಂಡಿತರ ವಿಶ್ಲೇಷಣೆ ಮತ್ತು ಸಾಮಾನ್ಯ ನಿರೂಪಣೆಯನ್ನೂ ಕೈಬಿಡಲಾಗಿದೆ.




**▸ ಭವಿಷ್ಯದ ಡ್ರಾಗಳಲ್ಲೂ ಮುಖಾಮುಖಿ ಬೇಡಿಕೆ**

ಇಸ್ರೇಲ್ ಮತ್ತು ಐರ್ಲೆಂಡ್ ತಂಡಗಳನ್ನು ಭವಿಷ್ಯದ ಯುಇಎಫ್‌ಎ ಸ್ಪರ್ಧೆಗಳ ಡ್ರಾಗಳಲ್ಲಿ ಪ್ರತ್ಯೇಕವಾಗಿ ಇರಿಸಬೇಕೆಂದು FAI ಮನವಿ ಮಾಡಿತ್ತು. ಆದರೆ ಯುಇಎಫ್‌ಎ ಇಂತಹ ನಿರ್ಧಾರಗಳನ್ನು ಭದ್ರತಾ ಪರಿಸ್ಥಿತಿ ಹಾಗೂ ನೇರ ಸಂಘರ್ಷದಂತಹ ಅಂಶಗಳನ್ನು ಆಧರಿಸಿ ಪ್ರಕರಣವಾರು ಪರಿಶೀಲಿಸುವುದಾಗಿ ತಿಳಿಸಿದೆ. ಎರಡೂ ದೇಶಗಳು ಪರಸ್ಪರ ನೇರ ಸಂಘರ್ಷದಲ್ಲಿಲ್ಲ ಎಂಬ ಕಾರಣಕ್ಕೆ ಅವುಗಳನ್ನು ಕಡ್ಡಾಯವಾಗಿ ಪ್ರತ್ಯೇಕಿಸುವ ಅಗತ್ಯವಿಲ್ಲ ಎಂದು ಯುಇಎಫ್‌ಎ ಸ್ಪಷ್ಟಪಡಿಸಿದೆ.

**▸ ಕೋಚ್ ಹೇಳಿಕೆಗೆ ಇಸ್ರೇಲ್ ಆಕ್ಷೇಪ**

ಐರ್ಲೆಂಡ್ ಕೋಚ್ ಹೈಮಿರ್ ಹಾಲ್‌ಗ್ರಿಮ್ಸನ್ ಪಂದ್ಯ ಆಡುವ ಕುರಿತು ಅಸಮಾಧಾನ ವ್ಯಕ್ತಪಡಿಸಿದ್ದು, ತಂಡವು 'ಜನಾಂಗಹತ್ಯೆಯ ವಿರುದ್ಧ' ಆಡುತ್ತಿದೆ ಎಂದು ಹೇಳಿದ್ದಾರೆ. ಇದಕ್ಕೆ ಇಸ್ರೇಲ್ ಫುಟ್‌ಬಾಲ್ ಅಸೋಸಿಯೇಷನ್ ತೀವ್ರ ಪ್ರತಿಕ್ರಿಯೆ ನೀಡಿದೆ. ಕೋಚ್ ಹೇಳಿಕೆಯನ್ನು ಅದು ಟೀಕಿಸಿದೆ.

ಇದೇ ವೇಳೆ FAI ಫುಟ್‌ಬಾಲ್ ನಿರ್ದೇಶಕ ಜಾನ್ ಮಾರ್ಟಿನ್ ಪಂದ್ಯಗಳನ್ನು ಆಡಿಸುವ ನಿರ್ಧಾರದ ಹೊಣೆಗಾರಿಕೆಯನ್ನು ಆಟಗಾರರ ಮೇಲೆ ಹಾಕಬಾರದು ಎಂದು ಹೇಳಿದ್ದಾರೆ. ಪಂದ್ಯಗಳನ್ನು ಆಡದಿದ್ದರೆ ಐರಿಷ್ ಫುಟ್‌ಬಾಲ್‌ಗೆ ಯುಇಎಫ್‌ಎ ಕ್ರಮದಿಂದ ಗಂಭೀರ ಪರಿಣಾಮ ಎದುರಾಗಬಹುದು ಎಂಬುದು FAIಯ ಪ್ರಮುಖ ಆತಂಕವಾಗಿದೆ.

**▸ ಪ್ಯಾಲೆಸ್ತೀನ್‌ಗೆ ಐರ್ಲೆಂಡ್ ಬೆಂಬಲ**

2023ರ ಅಕ್ಟೋಬರ್‌ನಲ್ಲಿ ಇಸ್ರೇಲ್–ಹಮಾಸ್ ಸಂಘರ್ಷ ಆರಂಭವಾದ ನಂತರ ಐರ್ಲೆಂಡ್ ಪ್ಯಾಲೆಸ್ತೀನ್‌ಗೆ ಬೆಂಬಲ ವ್ಯಕ್ತಪಡಿಸುತ್ತಿರುವ ಪ್ರಮುಖ ಯುರೋಪಿಯನ್ ರಾಷ್ಟ್ರಗಳಲ್ಲಿ ಒಂದಾಗಿದೆ. 2024ರಲ್ಲಿ ಐರ್ಲೆಂಡ್ ಪ್ಯಾಲೆಸ್ತೀನ್ ರಾಜ್ಯವನ್ನು ಅಧಿಕೃತವಾಗಿ ಗುರುತಿಸಿತ್ತು. ಗಾಜಾ ಕುರಿತ ಅಂತಾರಾಷ್ಟ್ರೀಯ ನ್ಯಾಯಾಲಯದ ಪ್ರಕರಣದಲ್ಲೂ ದಕ್ಷಿಣ ಆಫ್ರಿಕಾದ ಅರ್ಜಿಗೆ ಐರ್ಲೆಂಡ್ ಬೆಂಬಲ ನೀಡಿದೆ.



ಇತ್ತೀಚಿನ ಬೆಳವಣಿಗೆಯಲ್ಲಿ 160ಕ್ಕೂ ಹೆಚ್ಚು ಐರಿಷ್ ಕ್ರೀಡಾಪಟುಗಳು ಇಸ್ರೇಲ್ ವಿರುದ್ಧದ ಪಂದ್ಯಗಳನ್ನು ಬಹಿಷ್ಕರಿಸುವಂತೆ ಕರೆ ನೀಡಿರುವ ಮುಕ್ತ ಪತ್ರಕ್ಕೆ ಸಹಿ ಹಾಕಿದ್ದಾರೆ. ಪಂದ್ಯಗಳನ್ನು ನಡೆಸುವ ಈಂಖ ಮತ್ತು ಯುಇಎಫ್‌ಎ ವಿರುದ್ಧವೂ ಪ್ರತಿಭಟನೆಗಳು ಮುಂದುವರಿದಿವೆ.

- ಸೆ.27: ಇಸ್ರೇಲ್ ಐರ್ಲೆಂಡ್ ಪಂದ್ಯ, ಡೆಬ್ರೆಸೆನ್, ಹಂಗೇರಿ
- ಅ.4: ಐರ್ಲೆಂಡ್‌ಇಸ್ರೇಲ್ ಪಂದ್ಯ, ಬಾಕಾ ಟೊಪೋಲಾ, ಸರ್ಬಿಯಾ
- ಎರಡೂ ಪಂದ್ಯಗಳಿಗೆ ಐರಿಷ್ ಅಭಿಮಾನಿಗಳಿಗೆ ಟಿಕೆಟ್ ಇಲ್ಲ
- ಅ.4ರ ಪಂದ್ಯ ಬಂದ್ ಬಾಗಿಲಿನ ಹಿಂದೆ ನಡೆಯಲಿದೆ
- FAIಯ ಪಂದ್ಯ ಬಹಿಷ್ಕಾರ ಪ್ರಸ್ತಾವನೆಗೆ 75–32 ಮತಗಳ ಅನುಮೋದನೆ
- 160ಕ್ಕೂ ಹೆಚ್ಚು ಐರಿಷ್ ಕ್ರೀಡಾಪಟುಗಳಿಂದ ಬಹಿಷ್ಕಾರಕ್ಕೆ ಕರೆ
- ಭವಿಷ್ಯದ ಡ್ರಾಗಳಲ್ಲಿ ಇಸ್ರೇಲ್– ಐರ್ಲೆಂಡ್ ತಂಡಗಳನ್ನು ಪ್ರತ್ಯೇಕಿಸುವ ಈಂಖ ಮನವಿಯನ್ನು ಯುಇಎಫ್‌ಎ ಒಪ್ಪಿಲ್ಲ.

## ಲಂಡನ್‌ಗಷ್ಟೇ ಸೀಮಿತವಲ್ಲ ಬ್ರಿಟನ್ ಫ್ಯಾಷನ್ ಲೋಕ
### ರಾಜಧಾನಿಯಾಚೆಗೂ ಪ್ರತಿಭೆ ಬೆಳೆಸಲು 'ಫ್ಯಾಷನ್ ಬ್ರಿಟನ್' ಉಪಕ್ರಮ

ಲಂಡನ್ ಫ್ಯಾಷನ್ ವೀಕ್ ಮುಕ್ತಾಯದ ಬೆನ್ನಲ್ಲೇ ಬ್ರಿಟನ್‌ನ ಫ್ಯಾಷನ್ ಕ್ಷೇತ್ರವನ್ನು ಲಂಡನ್ ಕೇಂದ್ರಿತವಾಗಿರಿಸದೆ ದೇಶದ ವಿವಿಧ ಭಾಗಗಳಲ್ಲಿರುವ ಪ್ರತಿಭೆಗಳಿಗೆ ಅವಕಾಶ ಕಲ್ಪಿಸುವ ಪ್ರಯತ್ನ ಆರಂಭವಾಗಿದೆ.

ಬ್ರಿಟಿಷ್ ಫ್ಯಾಷನ್ ಕೌನ್ಸಿಲ್ 'ಫ್ಯಾಷನ್ ಬ್ರಿಟನ್' ಎಂಬ ಉಪಕ್ರಮದ ಮೂಲಕ ಲಂಡನ್‌ನ ಹೊರಗಿನ ಫ್ಯಾಷನ್ ಪ್ರತಿಭೆಗಳನ್ನು ಉದ್ಯಮಕ್ಕೆ ಸಂಪರ್ಕಿಸಲು ಮುಂದಾಗಿದೆ. ಈ ವರ್ಷದ ಲಂಡನ್ ಫ್ಯಾಷನ್ ವೀಕ್‌ಗೆ ಸಂಬಂಧಿಸಿದಂತೆ ಇಂಗ್ಲೆಂಡ್, ವೇಲ್ಸ್ ಹಾಗೂ ಸ್ಕಾಟ್ಲೆಂಡ್‌ನ ವಿವಿಧ ನಗರಗಳಲ್ಲಿ ಪಾಪ್‌ಅಪ್ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದ್ದು, ಬ್ರಿಟನ್‌ನ ಫ್ಯಾಷನ್ ಕ್ಷೇತ್ರ ಲಂಡನ್‌ಗಷ್ಟೇ ಸೀಮಿತವಲ್ಲ ಎಂಬ ಸಂದೇಶ ಸಾರಲಾಗಿದೆ. ಮುಂದಿನ ವರ್ಷ ಉತ್ತರ ಐರ್ಲೆಂಡ್‌ನ್ನೂ ಈ ಕಾರ್ಯಕ್ರಮಕ್ಕೆ ಸೇರಿಸಲಾಗುವುದು ಎಂದು ಕೌನ್ಸಿಲ್ ತಿಳಿಸಿದೆ.

ಹೌಸ್ ಆಫ್ ಕಾಮನ್ಸ್‌ನ ಇತ್ತೀಚಿನ ವರದಿ ಪ್ರಕಾರ, 2022ರಲ್ಲಿ ಬ್ರಿಟನ್‌ನ ಸೃಜನಶೀಲ ಉದ್ಯಮಗಳ ಆರ್ಥಿಕ ಉತ್ಪಾದನೆಯ ಶೇ.51ರಷ್ಟು ಲಂಡನ್‌ನಿಂದಲೇ ಬಂದಿತ್ತು. ಆದರೆ ಮ್ಯಾಂಚೆಸ್ಟರ್, ಲೀಡ್ಸ್ ಸೇರಿದಂತೆ ದೇಶದ ಹಲವು ನಗರಗಳಲ್ಲೂ ಸೃಜನಶೀಲ ಉದ್ಯಮಗಳ ಪ್ರಮುಖ ಕೇಂದ್ರಗಳು ಬೆಳೆಯುತ್ತಿವೆ.





**▸ 'ಲಂಡನ್‌ಗೆ ಬರಲೇಬೇಕು ಎಂಬ ನಿಯಮವಿಲ್ಲ'**

ಅಂತರರಾಷ್ಟ್ರೀಯ ಫ್ಯಾಷನ್ ಬ್ರ್ಯಾಂಡ್ 'ಲವರ್‌ಬಾಯ್'ನ ಸಂಸ್ಥಾಪಕ ಹಾಗೂ ಸೃಜನಶೀಲ ನಿರ್ದೇಶಕ ಚಾರ್ಲ್ಸ್ ಜೆಫ್ರಿ, ಫ್ಯಾಷನ್ ಕ್ಷೇತ್ರದಲ್ಲಿ ಯಶಸ್ವಿಯಾಗಲು ಲಂಡನ್‌ಗೆ ಬರಲೇಬೇಕು ಎಂಬ ಕಲ್ಪನೆ ಬದಲಾಗಬೇಕಿದೆ ಎಂದು ಹೇಳಿದ್ದಾರೆ.

ವಿವಿಧ ನಗರಗಳಲ್ಲಿ ಉತ್ತಮ ಗುಣಮಟ್ಟದ ಫ್ಯಾಷನ್ ಶಿಕ್ಷಣ ಮತ್ತು ತರಬೇತಿ ಲಭ್ಯವಿದೆ. ತಮ್ಮ ವೃತ್ತಿಜೀವನದ ಆರಂಭದಲ್ಲಿ ಪೂರ್ವ ಲಂಡನ್‌ನ ಡಾಲ್ಸ್ಟನ್‌ನ ಸಣ್ಣ ಸ್ಟುಡಿಯೊದಲ್ಲಿ ಕೆಲಸ ಮಾಡುತ್ತಿದ್ದುದನ್ನು ನೆನಪಿಸಿಕೊಂಡ ಅವರು, ಇದೀಗ ಲಂಡನ್‌ನಲ್ಲಿದ್ದ ಹಲವು ಬಟ್ಟೆ ಮಾರುಕಟ್ಟೆಗಳು ಕಣ್ಮರೆಯಾಗಿವೆ. ಮ್ಯಾಂಚೆಸ್ಟರ್‌ನ ಸಣ್ಣ ಬಟ್ಟೆ ಅಂಗಡಿಗಳಲ್ಲಿ ಕಡಿಮೆ ದರದಲ್ಲಿ ಉತ್ತಮ ವಸ್ತುಗಳು ದೊರೆಯುತ್ತವೆ ಎಂದಿದ್ದಾರೆ.

**▸ ಬರ್ಮಿಂಗ್‌ಹ್ಯಾಮ್ ಪ್ರತಿಭೆಗೂ ಅವಕಾಶ**

ಬರ್ಮಿಂಗ್‌ಹ್ಯಾಮ್ ಸಿಟಿ ಯುನಿವರ್ಸಿಟಿಯ ಫ್ಯಾಷನ್ ವಿನ್ಯಾಸ ಪದವೀಧರೆ ಇಮಾರ್ನಿ ಬೆನೆಟ್ ಅವರು ಲಂಡನ್‌ಗೆ ತೆರಳಿ ಸಹಪಾಠಿಗಳೊಂದಿಗೆ ತಮ್ಮ ವಿನ್ಯಾಸ ಯೋಜನೆಯನ್ನು ಪ್ರದರ್ಶಿಸಿದ್ದಾರೆ.

22 ವರ್ಷದ ಬೆನೆಟ್ ಅವರ ಪ್ರಕಾರ, ಲಂಡನ್ ದೊಡ್ಡ ನಗರವಾಗಿರುವುದರಿಂದ ಅಲ್ಲಿ ಅವಕಾಶಗಳು ಹೆಚ್ಚಿವೆ. ಆದರೆ ಬರ್ಮಿಂಗ್‌ಹ್ಯಾಮ್‌ನಲ್ಲಿಯೂ ಫ್ಯಾಷನ್ ಕ್ಷೇತ್ರದ ಕೆಲಸಗಳಿಗೆ ಈಗ ಹೆಚ್ಚಿನ ಮನ್ನಣೆ ದೊರೆಯುತ್ತಿದೆ. ವಿವಿಧ ನಗರಗಳ ವಿಭಿನ್ನ ಸಂಸ್ಕೃತಿ, ಬಣ್ಣಗಳ ಬಳಕೆ ಮತ್ತು ಜೀವನಶೈಲಿ ವಿನ್ಯಾಸಕರ ದೃಷ್ಟಿಕೋನವನ್ನೇ ಬದಲಾಯಿಸಬಹುದು ಎಂದು ಅವರು ಹೇಳಿದ್ದಾರೆ.

ಅದೇ ವಿಶ್ವವಿದ್ಯಾಲಯದ ಮತ್ತೊಬ್ಬ ಪದವೀಧರ ಸೀನ್ ಪಜರಿಲೊ, ತಂತ್ರಜ್ಞಾನ ಮತ್ತು ಫ್ಯಾಷನ್ ಕ್ಷೇತ್ರಗಳ ನಡುವಿನ ಸಂಯೋಜನೆಯಿಂದ ಮುಂದಿನ ದಿನಗಳಲ್ಲಿ ಹೊಸ ಉದ್ಯೋಗಾವಕಾಶಗಳು ಸೃಷ್ಟಿಯಾಗಲಿವೆ ಎಂಬ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

**▸ ಸ್ಥಳೀಯ ಮಟ್ಟದಲ್ಲೇ ಮಾರ್ಗದರ್ಶನ**

ಬ್ರಿಟಿಷ್ ಫ್ಯಾಷನ್ ಕೌನ್ಸಿಲ್‌ನ ನೆಟ್‌ವರ್ಕ್ ನಿರ್ದೇಶಕಿ ನಟಾಲಿ ಪಾಟರ್ ಅವರ ಪ್ರಕಾರ, 'ಫ್ಯಾಷನ್ ಬ್ರಿಟನ್' ಉಪಕ್ರಮದ ಉದ್ದೇಶ ಬ್ರಿಟಿಷ್ ಫ್ಯಾಷನ್ ಲಂಡನ್‌ಗಿಂತ ದೊಡ್ಡದು ಎಂಬುದನ್ನು ಗುರುತಿಸುವುದು.



ಲಂಡನ್ ಫ್ಯಾಷನ್ ವೀಕ್‌ಗೂ ಮುನ್ನ ಲಂಡನ್, ಬ್ರಿಸ್ಟಲ್, ಮ್ಯಾಂಚೆಸ್ಟರ್, ಲಿವರ್‌ಪೂಲ್, ನ್ಯೂಕ್ಯಾಸಲ್, ಎಡಿನ್‌ಬರ್ಗ್, ಡಂಡಿ ಮತ್ತು ಕಾರ್ಡಿಫ್ ನಗರಗಳಲ್ಲಿ ಕಾರ್ಯಕ್ರಮಗಳನ್ನು ನಡೆಸಲಾಗಿದೆ.

ದೇಶದ ವಿವಿಧ ಭಾಗಗಳ ಪ್ರತಿಭೆಗಳಿಗೆ ಸ್ಥಳೀಯ ಹಾಗೂ ಪ್ರಾದೇಶಿಕ ಮಟ್ಟದಲ್ಲೇ ಅಗತ್ಯ ಮೂಲಸೌಕರ್ಯ, ಉದ್ಯಮ ಸಂಪರ್ಕ, ಮಾರ್ಗದರ್ಶನ ಮತ್ತು ಚಿಲ್ಲರೆ ಮಾರುಕಟ್ಟೆ ಪ್ರವೇಶ ಕಲ್ಪಿಸುವುದು ಉಪಕ್ರಮದ ಉದ್ದೇಶವಾಗಿದೆ ಎಂದು ಪಾಟರ್ ವಿವರಿಸಿದ್ದಾರೆ.

**▸ 'ಲಂಡನ್ ಇನ್ನೂ ಕೇಂದ್ರವಾಗಿರಲಿದೆ'**

ಬ್ರಿಟಿಷ್ ವಿನ್ಯಾಸಕಿ ಪ್ರಿಯಾ ಅಹ್ಲುವಾಲಿಯಾ, ಫ್ಯಾಷನ್ ಕ್ಷೇತ್ರದಲ್ಲಿ ಲಂಡನ್ ಅನ್ನು 'ಕೇಂದ್ರ'ವೆಂದು ನೋಡುವ ಮನೋಭಾವ ಇನ್ನೂ ಇದೆ ಎಂದು ಹೇಳಿದ್ದಾರೆ. ಉತ್ತರ ಇಂಗ್ಲೆಂಡ್, ವೇಲ್ಸ್ ಮತ್ತು ಸ್ಕಾಟ್ಲೆಂಡ್‌ನಿಂದಲೂ ಅತ್ಯುತ್ತಮ ವಿನ್ಯಾಸಕರು ಹೊರಹೊಮ್ಮಿದ್ದಾರೆ ಎಂದು ಅವರು ಗಮನಸೆಳೆದಿದ್ದಾರೆ.

ಆದರೆ ಫ್ಯಾಷನ್ ಕ್ಷೇತ್ರವನ್ನು ವಿಕೇಂದ್ರೀಕರಿಸಿದರೂ ಲಂಡನ್ ಬ್ರಿಟನ್‌ನ ಫ್ಯಾಷನ್ ಕೇಂದ್ರವಾಗಿ ಮುಂದುವರಿಯಲಿದೆ. ಹೀಗಾಗಿ ಲಂಡನ್‌ಗೆ ಬಂದು ಪ್ರದರ್ಶನ ನೀಡಬೇಕಾದ ಪ್ರತಿಭೆಗಳಿಗೆ ಪ್ರಯಾಣ ಮತ್ತು ಇತರ ವೆಚ್ಚಗಳಲ್ಲೂ ನೆರವು ನೀಡುವ ವ್ಯವಸ್ಥೆ ಅಗತ್ಯ ಎಂದು ಅವರು ಹೇಳಿದ್ದಾರೆ.

ಫ್ಯಾಷನ್ ಕ್ಷೇತ್ರ ಪ್ರವೇಶಿಸಲು ವಿಶ್ವವಿದ್ಯಾಲಯದ ಪದವಿ ನೆರವಾಗಬಹುದು. ಆದರೆ ಅಂತಿಮವಾಗಿ ಪ್ರತಿಭೆ, ಕೆಲಸದ ಗುಣಮಟ್ಟ ಮತ್ತು ಪರಿಶ್ರಮವೇ ಪ್ರಮುಖ ಎಂದು ಚಾರ್ಲ್ಸ್ ಜೆಫ್ರಿ ಅಭಿಪ್ರಾಯಪಟ್ಟಿದ್ದಾರೆ.

- ಲಂಡನ್ ಫ್ಯಾಷನ್ ವೀಕ್ ಅನ್ನು ದೇಶದ ಇತರ ಭಾಗಗಳಿಗೂ ವಿಸ್ತರಿಸುವ ಪ್ರಯತ್ನ.
- ಇಂಗ್ಲೆಂಡ್, ವೇಲ್ಸ್ ಮತ್ತು ಸ್ಕಾಟ್ಲೆಂಡ್‌ನಲ್ಲಿ ಪಾಪ್‌ಅಪ್ ಕಾರ್ಯಕ್ರಮಗಳು.
- ಮುಂದಿನ ವರ್ಷ ಉತ್ತರ ಐರ್ಲೆಂಡ್‌ಗೂ ಕಾರ್ಯಕ್ರಮ ವಿಸ್ತರಣೆ.
- ಮ್ಯಾಂಚೆಸ್ಟರ್, ಲೀಡ್ಸ್ ಸೇರಿದಂತೆ ಹಲವು ನಗರಗಳಲ್ಲಿ ಸೃಜನಶೀಲ ಉದ್ಯಮಗಳ ಬೆಳವಣಿಗೆ.
- ಸ್ಥಳೀಯ ಪ್ರತಿಭೆಗಳಿಗೆ ಉದ್ಯಮ ಸಂಪರ್ಕ, ಮಾರ್ಗದರ್ಶನ ಮತ್ತು ಮಾರುಕಟ್ಟೆ ಅವಕಾಶ ಕಲ್ಪಿಸುವ ಉದ್ದೇಶ.
- ಲಂಡನ್ ಇನ್ನೂ ಬ್ರಿಟನ್‌ನ ಫ್ಯಾಷನ್ ಕ್ಷೇತ್ರದ ಪ್ರಮುಖ ಕೇಂದ್ರವಾಗಿದ್ದರೂ, ದೇಶದ ಇತರ ಭಾಗಗಳ ಪ್ರತಿಭೆಗೂ ಹೆಚ್ಚಿನ ಅವಕಾಶ ಕಲ್ಪಿಸುವ ಗುರಿ.

## ಜೀವನ ರೂಪಿಸಿರುವ ಧಾರ್ಮಿಕ ತತ್ವಗಳು ಮತ್ತು ಸಾಮಾಜಿಕ ನಿಯಮಗಳು

ಮನುಷ್ಯನ ಜನನದಿಂದ ಹಿಡಿದು ಅಂತ್ಯಕ್ರಿಯೆಯವರೆಗೂ, ಧಾರ್ಮಿಕ ತತ್ವಗಳು ಮತ್ತು ಸಾಮಾಜಿಕ ನಿಯಮಗಳ ಮೂಲಕ ಜೀವನವನ್ನು ರೂಪಿಸುವಲ್ಲಿ ಮಸೀದಿಗಳು ಪ್ರಮುಖ ಪಾತ್ರವಹಿಸಿವೆ. ಮಸೀದಿಗಳು ಆರಾಧನಾ ಸ್ಥಳಗಳಾಗಿವೆ ಎಂಬುದು ನಿರ್ವಿವಾದ ಸತ್ಯ. ಆದರೆ, ಇಸ್ಲಾಂನಲ್ಲಿ ಆರಾಧನೆಯು ಕೇವಲ ಪ್ರಾರ್ಥನೆ, ಉಪವಾಸ, ತೀರ್ಥಯಾತ್ರೆ ಮತ್ತು ದಾನ–ಧರ್ಮಗಳಿಗೆ ಮಾತ್ರ ಸೀಮಿತವಾಗಿಲ್ಲ. ಸಹೋದರ–ಸಹೋದರಿಯರು, ಪೋಷಕರು, ಸಮಾಜ ಮತ್ತು ಸಹ–ನಾಗರಿಕರ ಹಕ್ಕುಗಳನ್ನು ಪೂರೈಸುವುದು ಕೂಡ ಸೇರಿದೆ.

ಪ್ರವಾದಿ ಮುಹಮ್ಮದ್ (ಸ) ಅವರ ಕಾಲದಲ್ಲಿ, ಮಸೀದಿಗಳು ಸಮುದಾಯದ ಎಲ್ಲಾ ನ್ಯಾಯಸಮ್ಮತ ಅಗತ್ಯಗಳನ್ನು ಪೂರೈಸುವ ಕೇಂದ್ರಗಳಾಗಿ ಕಾರ್ಯನಿರ್ವಹಿಸುತ್ತಿದ್ದವು. ಪ್ರವಾದಿಯವರ ಮಸೀದಿಯ (ಮಸ್ಜಿದ್–ಅನ್–ನಬವಿ) ಇತಿಹಾಸವನ್ನು ಗಮನಿಸಿದರೆ, 'ಸಹೀಹ್ ಅಲ್–ಬುಖಾರಿ'ಯ ನಿರೂಪಣೆಗಳ ಪ್ರಕಾರ, ಮಸೀದಿಯ ಒಂದು ಭಾಗವನ್ನು ಆರಾಧಕರು, ದೇವರ ಸ್ಮರಣೆಯಲ್ಲಿ ತೊಡಗಿರುವವರು ಮತ್ತು ಜ್ಞಾನಾಕಾಂಕ್ಷಿಗಳಿಗಾಗಿ ಮೀಸಲಿಡಲಾಗಿತ್ತು; ಇನ್ನೊಂದು ಭಾಗವನ್ನು ಸಾಮಾಜಿಕ ಮತ್ತು ಸಮುದಾಯದ ವ್ಯವಹಾರಗಳಿಗಾಗಿ ಬಳಸಲಾಗುತ್ತಿತ್ತು. ಅಲ್ಲಿ ರೋಗಿಗಳ ಆರೈಕೆಗಾಗಿ ಡೇರೆಗಳನ್ನು ಹಾಕಲಾಗುತ್ತಿತ್ತು, ಅಗತ್ಯವಿರುವವರಿಗೆ ಸಂಪತ್ತು ಮತ್ತು ಜೀವನಾವಶ್ಯಕ ವಸ್ತುಗಳನ್ನು ವಿತರಿಸಲಾಗುತ್ತಿತ್ತು, ವಿವಾಹ ಸಮಾರಂಭಗಳನ್ನು ನಡೆಸಲಾಗುತ್ತಿತ್ತು, ದೈನಂದಿನ ಸಾಮಾಜಿಕ ಮತ್ತು ಕಾನೂನು ವಿಷಯಗಳ ಬಗ್ಗೆ ಚರ್ಚಿಸಲಾಗುತ್ತಿತ್ತು, ಸಾರ್ವಜನಿಕ ವಿಷಯಗಳ ಕುರಿತು ಸಮಾಲೋಚನೆ ನಡೆಸಲಾಗುತ್ತಿತ್ತು, ಊಟದ ವ್ಯವಸ್ಥೆ ಮತ್ತು ಹಂಚಿಕೆ ನಡೆಯುತ್ತಿತ್ತು.



ಇಂದು, ಮಸೀದಿಗಳು ಏಕತೆ ಮತ್ತು ಸಹೋದರತ್ವವನ್ನು ಉತ್ತೇಜಿಸುವ ತುರ್ತು ಅಗತ್ಯವಿದೆ. ದೇಶವು ವಿಪತ್ತುಗಳು ಅಥವಾ ಸಂಕಷ್ಟಗಳನ್ನು ಎದುರಿಸಿದಾಗಲೆಲ್ಲಾ, ಅನೇಕ ಮಸೀದಿಗಳು ತಮ್ಮ ಬಾಗಿಲುಗಳನ್ನು ತೆರೆದಿದ್ದಲ್ಲದೆ, ಧರ್ಮ ಅಥವಾ ಸಮುದಾಯದ ಭೇದವಿಲ್ಲದೆ ಸಂತ್ರಸ್ತರಿಗೆ ಪರಿಹಾರವನ್ನು ಒದಗಿಸಿವೆ ಎಂಬುದು ಪದೇ ಪದೇ ಕಂಡುಬಂದಿದೆ. ರಾಷ್ಟ್ರೀಯ ಏಕತೆ, ಕೋಮು ಸೌಹಾರ್ದತೆ, ಶಿಕ್ಷಣ, ವ್ಯಕ್ತಿತ್ವ ವಿಕಸನ, ದಾರಿ ತಪ್ಪಿದ ಯುವಕರಿಗೆ ಮಾರ್ಗದರ್ಶನ ಮತ್ತು ಸಾರ್ವಜನಿಕ ಜಾಗೃತಿಯನ್ನು ಮೂಡಿಸುವ ಮೂಲಕ ಮಸೀದಿಗಳು ಕೇವಲ ಆರಾಧನೆಯನ್ನು ಮೀರಿ ಸೇವೆ ಸಲ್ಲಿಸಿವೆ ಎಂಬುದಕ್ಕೆ ಹಲವಾರು ಉದಾಹರಣೆಗಳಿವೆ.

ಪ್ರವಾದಿಯವರ ಕಾಲದಲ್ಲಿ, ಅವರ ಮಸೀದಿಯು 'ಅಶಾಬ್ ಅಲ್–ಸುಫ್ಫಾ'ಗೆ ಆಶ್ರಯ ನೀಡಿತ್ತು; ಆದರೆ ಇಂದು ಅನೇಕ ಮಸೀದಿಗಳು ಅರ್ಹ ವಿದ್ವಾಂಸರು ಅಲ್ಲಿ ವಾಸಿಸುವುದನ್ನು ಸಹ ನಿರುತ್ಸಾಹಗೊಳಿಸುತ್ತವೆ. ಅದೇ ಸಮಯದಲ್ಲಿ ಇತರರಿಗೆ ವ್ಯಾಪಕ ಸೌಲಭ್ಯಗಳನ್ನು ಒದಗಿಸುತ್ತವೆ. ಸುಭದ್ರ, ತತ್ವಬದ್ಧ ಮತ್ತು ನೈತಿಕ ರಾಜಕೀಯದ ಬೇರುಗಳು ಕೂಡ ಮಸೀದಿಯಲ್ಲಿಯೇ ಇವೆ. ಪ್ರವಾದಿ ಸುಲೈಮಾನ್ (ಸೊಲೊಮನ್), ಪ್ರವಾದಿ ದಾವೂದ್ (ಡೇವಿಡ್), ಪ್ರವಾದಿ ಯೂಸುಫ್ (ಜೋಸೆಫ್), ಪ್ರವಾದಿ ಮುಹಮ್ಮದ್ ಮತ್ತು 'ಸರಿಯಾದ ಮಾರ್ಗದರ್ಶನ ಪಡೆದ ಖಲೀಫರು' (ಖಿಲಫಾ–ಎ–ರಾಶಿದೂನ್) ನೀಡಿದ ಉದಾಹರಣೆಗಳು ನ್ಯಾಯ ಮತ್ತು ನೈತಿಕ ಜವಾಬ್ದಾರಿಯ ಮೇಲೆ ಆಧಾರಿತವಾದ ಆಡಳಿತ ಪದ್ಧತಿಯನ್ನು ಎತ್ತಿ ತೋರಿಸುತ್ತವೆ.

ಶಿಕ್ಷಣದ ಪ್ರಕ್ರಿಯೆಯೂ ಪ್ರವಾದಿಯವರ ಮಸೀದಿಯಿಂದಲೇ ಆರಂಭವಾಯಿತು. ಜ್ಞಾನದ ಪ್ರಸಾರಕ್ಕಾಗಿ ಪ್ರವಾದಿಯವರು ಅಪಾರ ಶ್ರಮ ವಹಿಸಿದರು. ಮಸೀದಿಯ ಸಮೀಪದಲ್ಲಿ ಅವರು ಒಂದು ಎತ್ತರದ ವೇದಿಕೆಯನ್ನು ನಿರ್ಮಿಸಿದ್ದರು; ಅಲ್ಲಿ ಸಹಚರರ ದೊಡ್ಡ ಗುಂಪು ಕಲಿಯಲು ಸೇರುತ್ತಿತ್ತು ಮತ್ತು ಅವರು ಸ್ವತಃ ಅವರಿಗೆ ಬೋಧಿಸುತ್ತಿದ್ದರು. ಗಮನಾರ್ಹ ಸಂಗತಿಯೆಂದರೆ, ಇಸ್ಲಾಂ ಧರ್ಮವೇ 'ಓದುವ' ಮತ್ತು 'ಜ್ಞಾನವನ್ನು ಪಡೆಯುವ' ಆದೇಶದೊಂದಿಗೆ ಪ್ರಾರಂಭವಾಯಿತು. ಒಬ್ಬ ವ್ಯಕ್ತಿಯು ಎಷ್ಟು ಹೆಚ್ಚು ಜ್ಞಾನವನ್ನು ಪಡೆಯುತ್ತಾನೋ, ದೇವರು ಅವನ ಸ್ಥಾನಮಾನವನ್ನು ಅಷ್ಟೇ ಉನ್ನತ ಮಟ್ಟಕ್ಕೇರಿಸುತ್ತಾನೆ ಎಂಬುದನ್ನು ಯಾವಾಗಲೂ ನೆನಪಿನಲ್ಲಿಟ್ಟುಕೊಳ್ಳಬೇಕು.

ಮುಫ್ತಿ ಮುಹಮ್ಮದ್ ನಸೀಮ್ ರಹ್ಮಾನಿ
ನಿರ್ದೇಶಕರು, ಅಲ್–ಮಹದ್
ಅಲ್–ಆಲಿ ಅಲ್–ಇಸ್ಲಾಮಿ, ದೆಹಲಿ

# ಉಜ್ಜನಿಯಲ್ಲಿ ಪೋಷಣ ಮಾಸ ದಿನಾಚರಣೆ



ಸಂಜೆವಾಣಿ ವಾರ್ತೆ

ಕೊಟ್ಟೂರು: ಸೆಪ್ಟೆಂಬರ್ 23: ಕೊಟ್ಟೂರು ತಾಲೂಕಿನ ಉಜ್ಜಿನಿ ಡಿ ಅಂಗನವಾಡಿ ಕೇಂದ್ರದಲ್ಲಿ ಪೋಷಣ ಮಾಸ ದಿನಾಚರಣೆ ಕಾರ್ಯಕ್ರಮವನ್ನು ಗಿಡಕ್ಕೆ ನೀರು ಹಾಕುವ ಮುಖಾಂತರ ಉದ್ಘಾಟನೆಯನ್ನು ಮಾಡಲಾಯಿತು ಪೋಷಣ ಮಾಸಾಚರಣೆಯ ಮಹತ್ವವನ್ನು ಗರ್ಭಿಣಿ ಬಾಣಂತಿ ಹಾಗೂ ಮಕ್ಕಳ ಆರೈಕೆ ಮಾಡುವ ಬಗ್ಗೆ ಪ್ರತಿನಿತ್ಯ ಸೇವಿಸುವ ಆಹಾರ ಸಮತೋಲನ ಆಹಾರದ ಬಗ್ಗೆ ಹಣ್ಣು ತರಕಾರಿ ಮೊಟ್ಟೆ ಹಾಲು ಆಹಾರ ಧಾನ್ಯಗಳ ಬಗ್ಗೆ ಅದರಲ್ಲಿರುವ ಪೋಷಕಾಂಶಗಳ ಬಗ್ಗೆ ಹಾಗೂ ಇಲಾಖೆಯಿಂದ ಸಿಗುವ ಮಾತೃ ವಂದನ ಯೋಜನೆ ಭಾಗ್ಯಲಕ್ಷ್ಮಿ ಸುಕನ್ಯಾ ಸಮೃದ್ಧಿ ಯೋಜನೆ ಬಗ್ಗೆ ವಿವರವಾದ ಮಾಹಿತಿಯನ್ನು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದಂತಹ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮೇಲ್ವಿಚಾರಕರಾದ ಶ್ರೀಮತಿ ಅನ್ನಪೂರ್ಣ ವಿವರಿಸಿದರು ಆರೋಗ್ಯ ಇಲಾಖೆ ಆಪ್ತ ಸಮಾಲೋಚಕರಾದ ಶ್ರೀ ಮರುಳಾರಾಧ್ಯ ಇವರು ಗರ್ಭಿಣಿ ತಾಯಂದಿರು ಹೆರಿಗೆ ಆಗುವವರೆಗೂ ಉತ್ತಮವಾದ ಕಥೆಗಳನ್ನು ಕೇಳಬೇಕು ಮನಸ್ಸು ಯಾವಾಗಲೂ ಒಳ್ಳೆಯ ಭಾವನೆಗಳಿಂದ ಕೂಡಿರಬೇಕು ಒಳ್ಳೆಯ ಮಾತುಗಳನ್ನು ಆಡುತ್ತಿರಬೇಕು ಒಳ್ಳೆ ಮಾತುಗಳನ್ನು ಕೇಳುತ್ತಿರಬೇಕು ಏಕೆಂದರೆ ಗರ್ಭದಲ್ಲಿರುವ ಮಗು ಪ್ರತಿಯೊಂದು ವಿಷಯವನ್ನು ಆಲಿಸುತ್ತದೆ ಎಂದು ತಿಳಿಸಿದರು ಆರೋಗ್ಯವಂತ ಮಗು ಜನಿಸಬೇಕಾದರೆ ಗರ್ಭಿಣಿ ಯರು ಪೋಷಕಾಂಶಗಳ ಇರುವ ಊಟ ಆರೋಗ್ಯ ಇಲಾಖೆಯಿಂದ ಸಿಗುವ ಸೌಲಭ್ಯಗಳನ್ನು ಸಕಾಲಕ್ಕೆ ಆರೋಗ್ಯ ತಪಾಸಣೆಯನ್ನು ಮಾಡಿಸಿಕೊಳ್ಳಬೇಕೆಂದು ತಿಳಿಸಿದರು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಉಮಾಪತಿ ಇವರು ಮಾತನಾಡಿ ಅಂಗನವಾಡಿ ಕಾರ್ಯಕರ್ತೆಯರು ಆರೋಗ್ಯವಂತ ಮಗುವಿಗಾಗಿ ದೇಶದ ಭವಿಷ್ಯಕ್ಕಾಗಿ ಗರ್ಭಿಣಿಯರ ಮನೆಗೆ ಭೇಟಿ ಮಾಡಿ ಅವರು ತೆಗೆದುಕೊಳ್ಳಬೇಕಾದ ಆಹಾರ ಚುಚ್ಚುಮದ್ದು ಲಸಿಕೆ ಇವುಗಳ ಬಗ್ಗೆ ಹೆಚ್ಚು ಕಾಳಜಿ ವಹಿಸಿ ನಿಮಗೆಲ್ಲ ಮಾಹಿತಿ ನೀಡುತ್ತಾರೆ ಆದ್ದರಿಂದ ಇಂತಹ ಕಾರ್ಯಕ್ರಮ ತುಂಬಾ ಉಪಯುಕ್ತವಾಗಿರುತ್ತದೆ ಗರ್ಬಿಣಿಯರಿಗೆ ಸೀಮಂತ,ಬಳೆ ತೊಡೆಸುವ ಕಾರ್ಯಕ್ರಮವನ್ನು ತುಂಬಾ ಅಚ್ಚುಕಟ್ಟಾಗಿ ನಿರ್ವಹಿಸಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು ಇಲ್ಲಿ ತಿಳಿಸುವ ವಿಷಯ ಇಲಾಖೆಯಿಂದ ಸಿಗುವ ಸೌಲಭ್ಯಗಳನ್ನು ಪಡೆದುಕೊಂಡು ಆರೋಗ್ಯವನ್ನು ಕಾಪಾಡಿಕೊಳ್ಳಿ ಆರೋಗ್ಯವಂತ ಮಗು ಜನಿಸಲಿ ಅಂಗನವಾಡಿ ಕೇಂದ್ರಗಳು ನಿಮಗೆಲ್ಲ ತವರುಮನೆ ಯಂತೆ ಇರುತ್ತದೆ ಎಂದು ಹೇಳಿ ಅವರಿಗೆ ಶುಭ ಹಾರೈಸಿದರು ಈ ಸಂಧರ್ಭದಲ್ಲಿ

ಆರೋಗ್ಯ ಇಲಾಖೆಯ ಹಿರಿಯ ಆರೋಗ್ಯ ಅಧಿಕಾರಿಗಳು ಕಿರಿಯ ಆರೋಗ್ಯ ಅಧಿಕಾರಿಗಳು ಆಶಾ ಕಾರ್ಯಕರ್ತೆಯರು ಹಾಜರಿದ್ದರು ಗ್ರಾಮದ ಸಮಾಜಮುಖಿ ಕೆಲಸ ನಿರ್ವಹಿಸುವ ಶ್ರೀಮತಿ ನೇತ್ರಾವತಿಯವರು ಗರ್ಭಿಣಿ ಮಹಿಳೆಯರಿಗೆ ಉಡಿ ತುಂಬುವ ಶಾಸ್ತ್ರವನ್ನು ನೆರವೇರಿಸಿದರು ಪ್ರಾರ್ಥನೆಯನ್ನು ಶ್ರೀಮತಿ ನಾಗಮ್ಮ ಸ್ವಾಗತವನ್ನು ಶ್ರೀಮತಿ ಎಂ ಜ್ಯೋತಿ ನಿರೂಪಣೆಯನ್ನು ಶ್ರೀಮತಿ ಶಾಂತ ನಿರ್ವಹಿಸಿದರು ಅಂಗನವಾಡಿ ಕಾರ್ಯಕರ್ತೆಯರಾದ ಶ್ರೀಮತಿ ದಾಕ್ಷಾಯಿಣಿ ಸುಮಂಗಲ ರೇಣುಕಾ ಪುಷ್ಪಾವತಿ ಬಿಡಿ ಗುಡ್ಡ ಮಂಜುಳಾ ನಿರ್ವಹಿಸಿದರು ಶ್ರೀಮತಿ ಸುಮಂಗಲ ವಂದನಾರ್ಪಣೆಯನ್ನು ಮಾಡಿದರು

# ಗ್ರಾಮ ಪಂಚಾಯಿತಿ ನಿರ್ಲಕ್ಷ್ಯ; ಬೇಸತ್ತು ಚರಂಡಿ ಸ್ವಚ್ಛಗೊಳಿಸಿದ ಮಹಿಳೆ.



ಸಂಜೆವಾಣಿ ವಾರ್ತೆ:

ಕೊಟ್ಟೂರು: ಸೆಪ್ಟೆಂಬರ್ 23: ಕೊಟ್ಟೂರು ತಾಲ್ಲೂಕಿನ ಕೆ. ಅಯ್ಯನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಹರಾಳು ಗ್ರಾಮದ ದುಮ್ಮಾಡಿ ಕೆಂಚಮ್ಮ ಎಂಬ ಮಹಿಳೆಯೋರ್ವರು ತಮ್ಮ ಮನೆಯ ಮುಂಭಾಗದ ಮುಖ್ಯ ಚರಂಡಿಯನ್ನು ತಾವೇ ಸ್ವಚ್ಛಗೊಳಿಸಿ ಎಲ್ಲರಿಗೂ ಮಾದರಿಯಾಗಿದ್ದಾರೆ.

ಇಲ್ಲಿಯವರೆಗೂ ಈ ಕಡೆ ವೈಜ್ಞಾನಿಕ ಚರಂಡಿ ಕಾಲುವೆಯೂ ನಿರ್ಮಾಣವಾಗದೇ ಆ ಕಡೆ ಕಾಂಕ್ರೀಟ್ ರಸ್ತೆಯೂ ಮಂಜೂರಾಗದೇ ಹಲವಾರು ವರ್ಷಗಳಿಂದ ಸಂಪೂರ್ಣವಾಗಿ ನಿರ್ಲಕ್ಷ್ಯಕ್ಕೊಳಕ್ಕಾಗಿರುವುದು ಇದೀಗ ವೈರಲ್ ಆಗಿದೆ ಸ್ವಚ್ಛತಾ ಸಿಬ್ಬಂದಿ ಬರುವುದನ್ನು ಕಾಯದೆ ಮಹಿಳೆಯೊಬ್ಬರು ತಾನೇ ಚರಂಡಿಗೆ ಇಳಿದು ಸ್ವಚ್ಛಗೊಳಿಸಿರುವುದು ಹಾಗೂ ಸ್ವಚ್ಛತೆ ಕಾಪಾಡುವುದು ಪ್ರತಿಯೊಬ್ಬರ ಜವಾಬ್ದಾರಿ ಎಂಬ ಸಂದೇಶ ಸಾರುವಂತೆ ಮಹಿಳೆಯೊಬ್ಬರು ತಾನೇ ಚರಂಡಿಯನ್ನು ಸ್ವಚ್ಛಗೊಳಿಸಿ ಸಾರ್ವಜನಿಕರ ಗಮನ ಸೆಳೆದಿದ್ದಾರೆ.ಗ್ರಾಮದ ಪ್ರಮುಖ ರಸ್ತೆಯೊಂದರ ಬದಿಯಲ್ಲಿದ್ದ ಚರಂಡಿಯಲ್ಲಿ ಮಣ್ಣು, ಕಸ ಹಾಗೂ ತ್ಯಾಜ್ಯ ಸಂಗ್ರಹವಾಗಿ ನೀರು ಸರಾಗವಾಗಿ ಹರಿಯದ ಪರಿಸ್ಥಿತಿ ನಿರ್ಮಾಣವಾಗಿತ್ತು. ಇದರಿಂದ ಚರಂಡಿ ನೀರು ರಸ್ತೆಯ ಮೇಲೆ ಹರಿದು ಸಾರ್ವಜನಿಕರಿಗೆ ತೊಂದರೆಯಾಗುವ ಸಾಧ್ಯತೆ ಇತ್ತು.ಇಂತಹ ಸಮಸ್ಯೆಯನ್ನು ಗಮನಿಸಿದ ಮಹಿಳೆ ತಾನೇ ಸ್ವಚ್ಛತಾ ಕಾರ್ಯಕ್ಕೆ ಮುಂದಾದರು.ಕೈಯಲ್ಲಿ ಸಲಿಕೆ ಸೇರಿದಂತೆ ಅಗತ್ಯ ಪರಿಕರಗಳನ್ನು ಹಿಡಿದು ಚರಂಡಿಯಲ್ಲಿದ್ದ ಕಸ-ಕಡ್ಡಿ ಹಾಗೂ ಹೂಳು ತೆಗೆದು ಸ್ವಚ್ಛಗೊಳಿಸಿದರು ಬಳಿಕ ಚರಂಡಿಯಲ್ಲಿ ನೀರು ಸರಾಗವಾಗಿ ಹರಿಯುವಂತೆ ವ್ಯವಸ್ಥೆ ಮಾಡಿದರು ಮಹಿಳೆಯ ಈ ಕಾರ್ಯವನ್ನು ಕಂಡ ಗ್ರಾಮಸ್ಥರು ಮೆಚ್ಚುಗೆ ವ್ಯಕ್ತಪಡಿಸಿದ್ದು ಸ್ವಚ್ಛತೆಯ ವಿಚಾರದಲ್ಲಿ ಪ್ರತಿಯೊಬ್ಬರೂ ಜವಾಬ್ದಾರಿ ವಹಿಸಬೇಕು ಎಂಬ ಸಂದೇಶವನ್ನು ಈ ಘಟನೆ ನೀಡಿದೆ ಎಂದು ತಿಳಿಸಿದರು ಗ್ರಾಮಗಳಲ್ಲಿ ಚರಂಡಿ, ರಸ್ತೆ ಹಾಗೂ ಸಾರ್ವಜನಿಕ ಸ್ಥಳಗಳ ಸ್ವಚ್ಛತೆಗೆ ಪಂಚಾಯಿತಿ ವತಿಯಿಂದ ನಿರಂತರವಾಗಿ ಕ್ರಮ ಕೈಗೊಳ್ಳಬೇಕಾದ ಅಗತ್ಯವಿದೆ.ಮಳೆಗಾಲದಲ್ಲಿ ಚರಂಡಿಗಳು ಕಸದಿಂದ ಮುಚ್ಚಿಕೊಂಡರೆ ನೀರು ನಿಂತು ಸೊಳ್ಳೆಗಳ ಉತ್ಪತ್ತಿ ಸೇರಿದಂತೆ ಹಲವು ಸಮಸ್ಯೆಗಳು ಎದುರಾಗುವ ಸಾಧ್ಯತೆ ಇರುವುದರಿಂದ ನಿಯಮಿತವಾಗಿ ಸ್ವಚ್ಛತಾ ಕಾರ್ಯ ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ

# ಬಸರಕೋಡು ಪ್ರೌಢಶಾಲೆಗೆ ತಾಲೂಕು ಮಟ್ಟದ ಕ್ರೀಡಾಕೂಟದಲ್ಲಿ ಸಮಗ್ರ ಪ್ರಶಸ್ತಿ



ಸಂಜೆವಾಣಿ ವಾರ್ತೆ

ಹಗರಿಬೊಮ್ಮನಹಳ್ಳಿ :ಸೆ.23 ತಾಲೂಕಿನ ಬಸರಕೋಡು ಸರ್ಕಾರಿ ಪ್ರೌಢಶಾಲೆ ಇತ್ತೀಚಿಗೆ ನಡೆದ ತಾಲೂಕ ಮಟ್ಟದ ಕ್ರೀಡಾಕೂಟಗಳಲ್ಲಿ ವೀರಾಗ್ರಣಿ ಸೇರಿದಂತೆ ಸಮಗ್ರ ಪ್ರಶಸ್ತಿಗಳನ್ನು ಬಾಚಿಕೊಂಡು ಜಿಲ್ಲಾ ಹಂತಕ್ಕೆ ಪ್ರವೇಶ ಪಡೆದಿದೆ. ಬಾಲಕಿಯರ ಖೋ-ಖೋ ಮತ್ತು ಬಾಲಕಿಯರ ಕಬ್ಬಡ್ಡಿಯಲ್ಲಿ ಪ್ರಥಮ ಸ್ಥಾನಗಳಿಸಿ ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿವೆ. ವೈಯಕ್ತಿಕ ಆಟಗಳಲ್ಲಿ ಸಹನಾ.ಕೆ.ಎಸ್. 200ಮೀ, 400 ಮೀಟರ್, 1500 ಮೀಟರ್ ಓಟಗಳಲ್ಲಿ ಪ್ರಥಮ ಸ್ಥಾನ ಪಡೆದು ವೀರಾಗ್ರಣಿ ಪ್ರಶಸ್ತಿ ಗಳಿಸಿಕೊಂಡಿದ್ದಾಳೆ.

ಸಹನಾ.ಬಿ 400ಮೀ ಹಾಗೂ 800 ಮೀ ಓಟದಲ್ಲಿ ದ್ವಿತೀಯ ಸ್ಥಾನ, ಪ್ರಕೃತಿ.ಎಂ. 800 ಮೀಟರ್ ಓಟದಲ್ಲಿ ಪ್ರಥಮ, 3000ಮೀ. ಓಟದಲ್ಲಿ ದ್ವಿತೀಯ ಸ್ಥಾನ, ಸಂಪತ್ ಕುಮಾರ್.ಎಸ್ ತ್ರಿವಿಧ ಜಿಗಿತದಲ್ಲಿ ದ್ವಿತೀಯ ಸ್ಥಾನ ಹಾಗೂ ಬಾಲಕಿಯರ 4x100 ಹಾಗೂ 4x400 ರಿಲೇ ಓಟದಲ್ಲಿ ಪ್ರಥಮ ಸ್ಥಾನ ಗಳಿಸಿ ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿರುತ್ತಾರೆ.

ಜಿಲ್ಲಾ ಮಟ್ಟಕ್ಕೆ ಆಯ್ಕೆಯಾದ ಎಲ್ಲಾ ಮಕ್ಕಳಿಗೂ ಹಾಗೂ ತರಬೇತಿ ನೀಡಿದ ದೈಹಿಕ ಶಿಕ್ಷಕರಾದ ಹೇಮಗಿರಿ.ಹೆಚ್. ಶಾಲೆಯ ಮುಖ್ಯಗುರುಗಳು ಹಾಗೂ ಸಹ ಶಿಕ್ಷಕರು, ಎಸ್.ಡಿ.ಎಂ.ಸಿ ಅಧ್ಯಕ್ಷರು ಮತ್ತು ಸದಸ್ಯರು, ಗ್ರಾಮಸ್ಥರು, ಪೋಷಕರು ಹಾಗೂ ಕ್ರೀಡಾಭಿಮಾನಿಗಳು ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.

# ವಿಜಯನಗರ: 9ನೇ ದಿನದ ಗಣೇಶ ವಿಸರ್ಜನೆ ಶಾಂತಿಯುತ ಸುರಿಯುವ ಮಳೆಯಲ್ಲಿಯೇ ಕುಣಿದು ಕುಪ್ಪಳಿಸಿದ ಯುವಕರು



ಸಂಜೆವಾಣಿ ವಾರ್ತೆ

ಹೊಸಪೇಟೆ.ಸೆ.23 ವಿಜಯನಗರ ಜಿಲ್ಲಾದ್ಯಂತ ಮಂಗಳವಾರ 9ನೇ ದಿನದ ಗಣೇಶ ವಿಸರ್ಜನೆ ಕಾರ್ಯಕ್ರಮ ಭಾರಿ ಬಿಗಿ ಪೊಲೀಸ್ ಭದ್ರತೆ ನಡುವೆ ಅತ್ಯಂತ ಶಾಂತಯುತವಾಗಿ ಜರುಗಿತು.

ಗಣೇಶ ಉತ್ಸವದ 9ನೇ ದಿನವಾದ ಮಂಗಳವಾರ ಜಿಲ್ಲಾದ್ಯಂತ 29 ಗಣೇಶ ಮೂರ್ತಿಗಳು ವಿಸರ್ಜನೆಗೊಂಡರೆ, ಹೊಸಪೇಟೆ ನಗರ ವ್ಯಾಪ್ತಿಯಲ್ಲಿ 4 ಗಣೇಶ ಮೂರ್ತಿಗಳು ವಿಸರ್ಜನೆಗೊಂಡವು.

ಮೆರವಣಿಗೆಗೆ ಮಳೆ ಅಡ್ಡಿ:

ನಗರದಲ್ಲಿ 9ನೇ ದಿನದ ಗಣೇಶ ವಿಸರ್ಜನಾ ಮೆರವಣಿಗೆಗೆ ಉತ್ಸವ ಸಮಿತಿಗಳು ಮಧ್ಯಾಹ್ನದಿಂದಲೇ ಸಿದ್ದತೆ ನಡೆಸಿದ್ದವು. ಆದರೆ ಸಂಜೆ 7 ಗಂಟೆಯಿಂದ ಸುರಿದ ಧಾರಾಕಾರ ಮಳೆ ಮೆರವಣಿಗೆಗೆ ಅಡ್ಡಿಯನ್ನುಂಟು ಮಾಡಿತ್ತು. ಆದರೆ ಯುವಕರು ಸುರಿಯುವ ಮಳೆಯಲ್ಲಿಯೇ ಡಿಜೆ ಸದ್ದಿಗೆ ಕುಣಿದು ಕುಪ್ಪಳಿಸಿ ಸಂಭ್ರಮಿಸಿದರು. 7 ಗಂಟೆಯಿಂದ ರಾತ್ರಿ 10 ಗಂಟೆವರೆಗೆ ಸುರಿದ ಮಳೆ, ಕೈಕೊಟ್ಟ ವಿದ್ಯುತ್ ನಡುವೆ ಗಣೇಶ ಮೂರ್ತಿಗಳ ವಿಸರ್ಜನೆ ಅತ್ಯಂತ ಶಾಂತಿಯುತವಾಗಿ ಜರುಗಿತು. ನಿರಂತರ ಮಳೆ ಹಿನ್ನಲೆಯಲ್ಲಿ ಡಿಜೆ ಸಲಕರಣೆಗಳಿಗೆ ತಾಡಪಾಲು ಹೊದಿಸುವ ಮೂಲಕ ಮೆರವಣಿಗೆಯಲ್ಲಿ ಕೊಂಡೊಯ್ಯಲಾಯಿತು.

ಭಾರಿ ಬಂದೋಬಸ್ತ್:

9ನೇ ದಿನದ ಗಣೇಶ ವಿಸರ್ಜನೆ ಹಿನ್ನಲೆಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಸ್.ಜಾಹ್ನವಿ ಮಾರ್ಗದರ್ಶದಲ್ಲಿ ಭಾರಿ ಪೊಲೀಸ್ ಬಂದೋಬಸ್ತ್ ಕಲ್ಪಿಸಲಾಗಿತ್ತು.

ಹೊಸಪೇಟೆ: ಹೊಸಪೇಟೆ ನಗರದಲ್ಲಿ ಸ್ಥಳೀಯ ಡಿವೈಎಸ್ಪಿ ಪಿ.ಮುರಳೀಧರ್ ನೇತೃತ್ವದಲ್ಲಿ ಪಿಐ ಗಳಾದ ಡಿ.ಹುಲುಗಪ್ಪ, ಫೈಜುಲ್ಲಾ, ಗುರುರಾಜ ಕಟ್ಟಿಮನಿ, ಸೋಮ್ಲಾ ನಾಯ್ಕ್, ಮಹಮದ್ ಗೌಸ್, ರಾಜೇಶ್ ಬಟಗುರ್ಕಿ ಮತ್ತವರ ಸಿಬ್ಬಂದಿ ಸುರಿಯುವ ಮಳೆಯಲ್ಲಿಯೂ ಯಾವುದೇ ಅಹಿತಕರ ಘಟನೆ ನಡೆಯದಂತೆ ಸೂಕ್ತ ಪೊಲೀಸ್ ಬಂದೋಬಸ್ತ್ ಏರ್ಪಡಿಸಿದ್ದರು.

# ಕೂಡ್ಲಿಗಿಯಲ್ಲಿ ಕಿವಿಯಲ್ಲಿ ಗುಯ್ ಗುಟ್ಟದ ಡಿಜೆ ಸದ್ದು, ಯುವಕರಲ್ಲಿ ಮಾತಿನ ವಾಗ್ವಾದ, ಪೊಲೀಸರಿಂದ ಶಮನ.




ಸಂಜೆವಾಣಿ ವಾರ್ತೆ

ಕೂಡ್ಲಿಗಿ. ಸೆ. 23 : - ಗಣೇಶ ಉತ್ಸವದಲ್ಲಿ ಸಂಭ್ರಮಿಸಿದ 9 ದಿನದ ಗಣೇಶ ವಿಸರ್ಜನಾ ಮೆರವಣಿಗೆಯಲ್ಲಿ ನಾಲ್ಕೈದು ಡಿಜೆ ಗಳ ಅಬ್ಬರದ ಸದ್ದು ಇಡೀ ಪಟ್ಟಣದ ಜನರ ಕಿವಿಯಲ್ಲಿ ಗುಯ್ ಗುಟ್ಟುತ್ತಿತ್ತು ಅಲ್ಲದೆ ಶರ್ಟ್ ಕಳಚಿ ಯುವಕರ ಕುಣಿತ ಮತ್ತು ಸಮಯವಾಗಿದೆ ಡಿಜೆ ನಿಲ್ಲಿಸಬೇಕಾಗುತ್ತೆ ಎನ್ನುವ ಮಾತಿನಲ್ಲಿ ಯುವಕರ ನಡುವೆ ನಡೆದ ವಾಗ್ವಾದ ಅತಿರೇಕವಾಗುವ ಮೊದಲೇ ಕೆಲ ಮುಖಂಡರು ಮತ್ತು ಪೊಲೀಸರ ಮದ್ಯಸ್ತಿಕೆಯಲ್ಲಿ ಗಲಾಟೆಯನ್ನು ಶಮನಗೊಳಿಸಿದ ವಾತಾವರಣ ಪಟ್ಟಣದ ಪ್ರವಾಸಿ ಮಂದಿರದ ಮುಂದಿನ ಎಂ ಜಿ ರಸ್ತೆಯಲ್ಲಿ ಕಳೆದ ರಾತ್ರಿ ಗಣೇಶ ವಿಸರ್ಜನಾ ಮೆರವಣಿಗೆ ಸಂದರ್ಭದಲ್ಲಿ ಕಂಡುಬಂದಿತು.

ಪಟ್ಟಣದಲ್ಲಿ ಗಣೇಶ ಪ್ರತಿಷ್ಟಾಪನೆ ಮಾಡಿರುವ ಗಣೇಶ ಮಂಡಳಿಯಿಂದ ಪಟ್ಟಣದಲ್ಲಿ 9 ದಿನದ ಅಂಗವಾಗಿ ಗಣೇಶ ವಿಸರ್ಜನೆ ಕಾರ್ಯವನ್ನು ಕೆಲವರು ಹಲಗೆ, ಉರುಮೆ ಡೊಳ್ಳು ವಾದ್ಯಗಳಿಂದ ಮೆರವಣಿಗೆ ನಡೆಸಿದರೆ ಇನ್ನು ಕೆಲವರೂ ಈ ಬಾರಿ ಎರಡು ಲಕ್ಷಕ್ಕೂ ಅಧಿಕ ಹಣ ವ್ಯಯ ಮಾಡಿ ಡಿಜೆ ತರಿಸಿದ್ದು ಪ್ರಮುಖ ಬೀದಿಗಳಲ್ಲಿ ಬಂದು ಮದಕರಿ ವೃತ್ತ,ಆಂಜನೇಯ ಪಾದಾಗಟ್ಟೆ ಮೂಲಕ ಅಂಬೇಡ್ಕರ್ ವೃತ್ತ ಸಾಗಿ ಮಹಾತ್ಮಾಗಾಂಧೀಜಿ ರಸ್ತೆಯಲ್ಲಿ ಡಿಜೆ ಸದ್ದು ಅಬ್ಬರವಾಗಿತ್ತು ಕುಟುಂಬ ಸಮೇತ ಚಿಕ್ಕ ಮಕ್ಕಳನ್ನು ಎತ್ತಿಕೊಂಡು ಬಂದು ಗಣೇಶನನ್ನು ನೋಡಲು ಬಂದವರು ಡಿಜೆ ಸದ್ದಿಗೆ ಬೆದರಿ ಮಕ್ಕಳಿಗೆ ಇದರಿಂದ ಹೃದಯದ ಬಡಿತವೂ ಜೋರಾಗಿ ಅನಾಹುತ ಆಗಲು ಬಹುದೇದು ಅರಿತ ಪೋಷಕರು ಮಕ್ಕಳನ್ನು ಕರೆದುಕೊಂಡು ಹೋದ ಪ್ರಸಂಗ ಕಂಡುಬಂದಿತು. ಯುವಕರ ಕುಣಿದು ಕುಪ್ಪಳಿಸುವ ಭರದಲ್ಲಿ ಧರಿಸಿದ ಶರ್ಟ್‌ಗಳನ್ನು ಕಳಚಿ ಬರೀ ಮೈಯಲ್ಲಿ ಕುಣಿಯಲು ಮುಂದಾಗಿದ್ದರು ಮತ್ತು ಪ್ರವಾಸಿ ಮಂದಿರದ ಮುಂದಿನ ರಸ್ತೆ ತಲುಪುತ್ತಿದ್ದಂತೆ ರಾತ್ರಿ 10 ಗಂಟೆ ಸಮಯವಾಗಿದ್ದರಿಂದ ಪೊಲೀಸರು ನೀಡಿದ ನಿಗದಿತ ಸಮಯ ಮುಗಿಯಲಿದೆ ಡಿಜೆ ಬಂದ್ ಮಾಡಲಿದ್ದಾರೆ ಎಂದು ಮಾತಾಡುವಾಗ ಯುವಕ ಯುವಕರಲ್ಲೇ ಮಾತಿನ ಚಕಮಕಿ ವಾಗ್ವದ ನಡೆಯಿತು ಅಷ್ಟರಲ್ಲೇ ಅಲ್ಲೇ ಇದ್ದ ಪೊಲೀಸರು ಕೆಲ ಮುಖಂಡರು ಮದ್ಯಸ್ತಿಕೆವಹಿಸಿ ಮುಂದಾಗುವ ಗಲಾಟೆಯನ್ನು ಶಮನಗೊಳಿಸಿ 9 ನೇ ದಿನದ ಗಣೇಶ ವಿಸರ್ಜನಾ ಕಾರ್ಯವನ್ನು ಸುಸೂತ್ರಗೊಳಿಸಿದರು.

# ಕೂಲಿ ಹಣ ವಿಳಂಬ ಕಾರ್ಮಿಕರ ಅಸಮಾಧಾನ ಕೂಲಿ ಹಣಕ್ಕಾಗಿ ಕಾರ್ಮಿಕರ ಪರದಾಟ




ಸಂಜೆವಾಣಿ ವಾರ್ತೆ:

ಕೊಟ್ಟೂರು: ಸೆಪ್ಟೆಂಬರ್ 23: ಕಾಳಾಪುರ ಗ್ರಾಪಂ ವ್ಯಾಪ್ತಿಯ ವಡ್ಡೆರಹಳ್ಳಿ ಮತ್ತು ಮೂರ್ತಿನಾಯಕನಹಳ್ಳಿ ಗ್ರಾಮಗಳ ಕಾರ್ಮಿಕರಿಗೆ ವಿ.ಬಿ.ಜಿ. ರಾಮ್ ಜಿ ಯೋಜನೆಯ ಹಣ ಪಾವತಿಗೆ ಆಗ್ರಹಿಸಿ ಗ್ರಾಕೂಸ್ ಸಂಘಟನೆ ಸದಸ್ಯರು ಕಾಳಾಪುರ ಪಂಚಾಯತ್ ಕಾರ್ಯದರ್ಶಿಗೆ ಮನವಿ ಪತ್ರವನ್ನು ಸಲ್ಲಿಸಿದರು ನಂತರ ಮಾತನಾಡಿದ ಗ್ರಾಕೂಸ್ ಸಂಘಟನೆಯ ನೇತ್ರಾವತಿಯವರು ಗ್ರಾಮೀಣ ಪ್ರದೇಶದ ಬಡ ಹಾಗೂ ಕೂಲಿ ಕಾರ್ಮಿಕರಿಗೆ ಉದ್ಯೋಗ ಕಲ್ಪಿಸುವ ಉದ್ದೇಶದಿಂದ ಜಾರಿಯಲ್ಲಿರುವ ವಿ.ಬಿ.ಜಿ. ರಾಮ್ ಜಿ ಯೋಜನೆಯಡಿ ಕಾಳಾಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ವಿವಿಧ ಹಳ್ಳಿಗಳಲ್ಲಿ ಕೆಲಸ ನಿರ್ವಹಿಸಿರುವ ಕಾರ್ಮಿಕರಿಗೆ ಕೂಲಿ ಹಣ ವಿಳಂಬವಾಗುತ್ತಿರುವುದರಿಂದ ಕಾರ್ಮಿಕರು ಸಂಕಷ್ಟಕ್ಕೆ ಸಿಲುಕಿದ್ದಾರೆ.ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹಲವು ಗ್ರಾಮಗಳಲ್ಲಿ ಯೋಜನೆಯಡಿಯಲ್ಲಿ ವಿವಿಧ ಕಾಮಗಾರಿಗಳಲ್ಲಿ ಕಾರ್ಮಿಕರು ಕೆಲಸ ಮಾಡಿದ್ದಾರೆ. ಕೆಲಸ ಪೂರ್ಣಗೊಳಿಸಿ ಎರಡು ತಿಂಗಳು ಕಳೆದರೂ ಕೂಲಿ ಹಣ ಬ್ಯಾಂಕ್ ಖಾತೆಗೆ ಜಮೆಯಾಗದಿರುವುದರಿಂದ ದಿನಗೂಲಿ ಅವಲಂಬಿತ ಕುಟುಂಬಗಳಿಗೆ ತೊಂದರೆಯಾಗಿದೆ ಎಂದು ಕಾರ್ಮಿಕರು ಅಳಲು ತೋಡಿಕೊಂಡಿದ್ದಾರೆ.ಕೂಲಿ ಹಣವನ್ನು ನಂಬಿಕೊಂಡು ಕುಟುಂಬದ ದಿನನಿತ್ಯದ ಖರ್ಚು, ಆಹಾರ ಸಾಮಗ್ರಿ, ಹಾಗೂ ವೈದ್ಯಕೀಯ ವೆಚ್ಚಗಳನ್ನು ನಿರ್ವಹಿಸುವ ಕಾರ್ಮಿಕರು ಹಣದ ವಿಳಂಬದಿಂದ ಆರ್ಥಿಕ ಸಂಕಷ್ಟ ಎದುರಿಸುವಂತಾಗಿದೆ. ಕೆಲಸ ಮಾಡಿದ ನಂತರ ಕೂಲಿ ಪಡೆಯಲು ಅನಗತ್ಯ ವಿಳಂಬವಾಗುತ್ತಿರುವುದು ಕಾರ್ಮಿಕರಲ್ಲಿ ಅಸಮಾಧಾನಕ್ಕೆ ಕಾರಣವಾಗಿದೆ.ಯೋಜನೆಯಡಿ ಕೆಲಸ ನೀಡುವ ಸಂದರ್ಭದಲ್ಲಿ ಕೂಲಿ ಹಣ ನಿಗದಿತ ಅವಧಿಯಲ್ಲಿ ಪಾವತಿಯಾಗಲಿದೆ ಎಂಬ ನಿರೀಕ್ಷೆಯಲ್ಲಿದ್ದ ಕಾರ್ಮಿಕರು, ಇದೀಗ ಹಣಕ್ಕಾಗಿ ಪಂಚಾಯಿತಿ ಕಚೇರಿ ಹಾಗೂ ಸಂಬಂಧಿಸಿದ ಅಧಿಕಾರಿಗಳನ್ನು ಸಂಪರ್ಕಿಸುವ ಪರಿಸ್ಥಿತಿ ನಿರ್ಮಾಣವಾಗಿದೆ. ಕೂಲಿ ಪಾವತಿ ವಿಳಂಬಕ್ಕೆ ಕಾರಣವೇನು ಎಂಬುದನ್ನು ಅಧಿಕಾರಿಗಳು ಸ್ಪಷ್ಟಪಡಿಸಿ ಬಾಕಿ ಇರುವ ಹಣವನ್ನು ಶೀಘ್ರವಾಗಿ ಬಿಡುಗಡೆ ಮಾಡಬೇಕು ಎಂದು ಒತ್ತಾಯಿಸಿದರು

ನಾವು ಕೆಲಸ ಮಾಡಿ ಹಲವು ದಿನಗಳಾಗಿವೆ. ಕೂಲಿ ಹಣ ಬಂದಿಲ್ಲ. ದಿನನಿತ್ಯದ ಜೀವನ ನಿರ್ವಹಣೆಗೆ ಕೂಲಿ ಹಣವೇ ಆಧಾರವಾಗಿದ್ದು, ಹಣ ವಿಳಂಬವಾಗಿರುವುದರಿಂದ ಕುಟುಂಬ ನಿರ್ವಹಣೆ ಕಷ್ಟವಾಗಿದೆ. ಸಂಬಂಧಿಸಿದ ಅಧಿಕಾರಿಗಳು ಕೂಡಲೇ ಕ್ರಮ ಕೈಗೊಂಡು ಬಾಕಿ ಕೂಲಿ ಹಣ ಪಾವತಿಸಬೇಕು ಎಂದು ಕಾರ್ಮಿಕರು ಆಗ್ರಹಿಸಿದರು ಈ ಸಂಧರ್ಭದಲ್ಲಿ ಗ್ರಾಕೂಸ್ ಸಂಘಟನೆಯ ಅಕ್ಕಮಹಾದೇವಿ,ಕಾಳಾಪುರ ಅಜ್ಜಯ್ಯ ಸೇರಿದಂತೆ ಎರಡೂ ಗ್ರಾಮದ ನೂರಾರು ಕಾರ್ಮಿಕರು ಹಾಜರಿದ್ದರು.

# ಉದ್ಯೋಗ ಖಾತ್ರಿ ಕಾರ್ಮಿಕ ಹೃದಯಘಾತದಿಂದ ಸಾವು



ಸಂಜೆವಾಣಿ ವಾರ್ತೆ

ಹಗರಿಬೊಮ್ಮನಹಳ್ಳಿ. ಸೆ.23 ತಾಲೂಕಿನ ದಶಮಾಪುರ ಗ್ರಾಮದ ಬಳಿ ಉದ್ಯೋಗ ಖಾತ್ರಿ ಕಾರ್ಯನಿರ್ವಹಿಸುತ್ತಿದ್ದ ಕಾರ್ಮಿಕ ಹೃದಯಘಾತದಿಂದ ಮೃತಪಟ್ಟಿರುವ ಘಟನೆ ಬೆಳಗ್ಗೆ ನಡೆದಿದೆ. ಮೃತ ವ್ಯಕ್ತಿ ಶಂಕ್ರಪ್ಪ (58) ದಶಮಾಪುರ ಗ್ರಾಮದವರ ಎಂದಿನಂತೆ ವಿಬಿಜಿ ರಾಮ್ ಜಿ ಯೋಜನೆಯ ಕಾರ್ಯ ನಿರ್ವಹಿಸಲು ಕೆಲಸಕ್ಕೆ ಹೋಗಿದ್ದು ಇವರಿಗೆ ದಿಢೀರನೆ ಎದೆ ನೋವು ಕಾಣಿಸಿಕೊಂಡು ಸ್ಥಳದಲ್ಲಿ ಕುಸಿತು ಬಿದ್ದಿದ್ದಾರೆ. ತಕ್ಷಣ ಅವರನ್ನು ಆಸ್ಪತ್ರೆಗೆ ಸಾಗಿಸಿದರು ಆದರೆ ಅಷ್ಟರಲ್ಲಿ ಅವರ ಪ್ರಾಣ ಪಕ್ಷಿ ಹಾರಿಹೋಗಿತ್ತು.


ವಿಷಯ ತಿಳಿದ ಘಟನೆ ಸ್ಥಳಕ್ಕೆ ಸಿಇಒ ಗರಿಮಾ ಪನ್ವಾರ್, ಕೆ ತಿಮ್ಮಪ್ಪ ಉಪ ಕಾರ್ಯದರ್ಶಿಗಳು, ಜಿ.ಪಂ. ಸಾಹೇಬಣ್ಣ ಎಇಇ ಜಿ ಪಂ ಭೇಟಿ ನೀಡಿ ನಂತರ ತಾಲೂಕಿನ ಮಾದೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಆನೇಕಲ್ ಗ್ರಾಮದಲ್ಲಿ ಗಿಃಉ ಖಂಒ ಉ ಯೊಜನೆಯಡಿ ಕೂಲಿ ಕಾರ್ಮಿಕರು ಗೋಕಟ್ಟೆ ಪುನಶ್ಚೇತನಾ ಹಾಗೂ ಕೃಷಿ ಹೊಂಡ ನಿರ್ಮಾಣ ಕಾಮಗಾರಿಗಳ ಸ್ಥಳಕ್ಕೆ ಭೇಟಿ ನೀಡಿ ಕೂಲಿ ಕಾರ್ಮಿಕರೊಂದಿಗೆ ಸಂವಾದ ನಡೆಸಿದರು.

ಸದರಿ ಕಾಮಗಾರಿಯಲ್ಲಿ ಎನ್ ಎಂ ಆರ್ ಎಸ್ ತೆಗೆದ ಒಟ್ಟು ಕೂಲಿ ಕಾರ್ಮಿಕರ ಸಂಖ್ಯೆ 124, ಸ್ಥಳದಲ್ಲಿ ಹಾಜರಿದ್ದು ಕೂಲಿಕಾರರ ಸಂಖ್ಯೆ ಪುರುಷರ 34 ಮಹಿಳೆಯರು 51 ಒಟ್ಟು 85 ಕಾರ್ಮಿಕರು ಹಾಜರಿರುವುದನ್ನು ಪರಿಶೀಲನೆ ಮಾಡಿದರು.

ಕುಡಿಯುವ ನೀರು,ನೆರಳು, ಪ್ರಥಮ ಚಿಕಿತ್ಸಾ ಪೆಟ್ಟಿಗೆಯನ್ನು ಹಾಗೂ ವಿಶೇಷ ಚೇತನರಿಗೆ 60% ರಿಯಾಯಿತಿ, ಮಹಿಳೆಯರ ಭಾಗವಹಿಸುವಿಕೆಯನ್ನು ಹೆಚ್ಚಿಸುವುದರ ಬಗ್ಗೆ , ಕೆಲಸಕ್ಕೆ ಬರುವವರಿಗೆ ಎನ್ ಎಂ ಆರ್ ಎಸ್ ಗಳನ್ನು ತೆಗೆಯಿವಂತೆ ಪಿಡಿಒಗೆ ಸೂಚಿಸಿದರು.

ಈ ಸಂದರ್ಭ ದಲ್ಲಿ ತಾಪಂ ಇ ಒ ಪಿ. ವಿಶ್ವನಾಥ, ಎ ಡಿ ರಮೇಶ್ ಮಹಾಲಿಂಗಾಪುರ ಇದ್ದರು

# ಸರ್ಕಾರದ ಘೋಷಣೆ, ಕೂಡ್ಲಿಗಿ ಈಗ ತೀವ್ರ ಬರಪೀಡಿತ. ಕಂಗಲಾದ ರೈತನಿಗೆ ಪರಿಹಾರ ಸಿಗುವ ನಂಬಿಕೆ.



ಸಂಜೆವಾಣಿ ವಾರ್ತೆ

ಕೂಡ್ಲಿಗಿ. ಸೆ. 23 :- ಮುಂಗಾರು ಮಳೆ ಕೈಕೊಟ್ಟ ಹಿನ್ನೆಲೆಯಲ್ಲಿ ಮಳೆಯಾಶ್ರಿತ ಪ್ರದೇಶವಾದ ಕೂಡ್ಲಿಗಿ ತಾಲೂಕು ಭಾಗಶಃ ಬರ ಎಂದು ಕಳೆದ ಪಟ್ಟಿಯಲ್ಲಿತ್ತು ನಂತರ ಸರ್ಕಾರಕ್ಕೆ ಸಲ್ಲಿಸಿದ ಶಾಸಕರ ಮಾಹಿತಿ ವಿವರಣೆ, ಅಧಿಕಾರಿಗಳ ಸಂಪೂರ್ಣ ಚಿತ್ರಣಗಳ ವರದಿಯಂತೆ ಈಗ ತೀವ್ರ ಬರಪೀಡಿತ ತಾಲೂಕು ಎಂದು ಸರ್ಕಾರವು ಆದೇಶ ಮಾಡಿ ಘೋಷಣೆ ಮಾಡಿದೆ.

ಬರದ ನಾಡು ಎಂದರೆ ಮೊಟ್ಟ ಮೊದಲು ನೆನಪಾಗುವುದು ಕಲ್ಯಾಣ ಕರ್ನಾಟಕದ ಹೆಬ್ಬಾಗಿಲಾಗಿರುವ ಕೂಡ್ಲಿಗಿ ತಾಲೂಕು, ನೀರಾವರಿ ಮೂಲವಿಲ್ಲದ ಮಳೆಯಾಶ್ರಿತ ಪ್ರದೇಶವಾಗಿರುವ ಈ ತಾಲೂಕಿನಲ್ಲಿ ಮಳೆ ಬಂದರೆ ಬಿತ್ತನೆ ಇಲ್ಲವಾದರೆ ಗುಳೇ ಹೋಗಿ ಜೀವನದ ತುತ್ತಿನ ಚೀಲ ತುಂಬಿಸಿಕೊಳ್ಳುವ ರೈತರ ಬದುಕು ದಿನನಿತ್ಯ ಕಾಣುತ್ತದೆ.

ಸರ್ಕಾರ ಹೊರಡಿಸಿದ ಮೊದಲ ಹಂತದ ಬರಪೀಡಿತ ಪಟ್ಟಿಯಲ್ಲಿ ಬರದ ನಾಡು ಕೂಡ್ಲಿಗಿ, ಕೊಟ್ಟೂರು ತಾಲೂಕುಗಳೇ ಮಾಯವಾಗಿದ್ದವು ಇದರಿಂದ ರೊಚ್ಚಿಗೆದ್ದ ರೈತರು ಪ್ರಗತಿಪರ ಸಂಘಟನೆಗಳ ಜೊತೆ ಸೇರಿ ಆಗಸ್ಟ್ 31ರಂದು ಕೂಡ್ಲಿಗಿ ಬಂದ್ ಮಾಡಿದ್ದು ಅಲ್ಲದೆ ಸೆಪ್ಟೆಂಬರ್ 5 ರಂದು ಮುಖ್ಯಮಂತ್ರಿ ಡಿ ಕೆ ಶಿವಕುಮಾರ್ ಅವರ ಪ್ರಜಾಸೇವಾ ರಾಜ್ಯ ಮಟ್ಟದ ಕಾರ್ಯಕ್ರಮಕ್ಕೆ ಕೂಡ್ಲಿಗಿಯಿಂದಲೇ ರಾಜ್ಯದ ಸಿಎಂ ಚಾಲನೆ ನೀಡುವಾಗಲು ರೈತರು ಮನವಿ ಸಲ್ಲಿಸಿ ಬರದ ಪಟ್ಟಿಯಲ್ಲಿ ಬರದ ನಾಡನ್ನು ಸೇರಿಸಲು ಒತ್ತಾಯಿಸಿದ್ದರು ಅಲ್ಲದೆ ಕೂಡ್ಲಿಗಿ ಶಾಸಕರು ಸಹ ಅಧಿವೇಶನದಲ್ಲಿ ಪ್ರಸ್ತಾಪಪಡಿಸಿ, ಕೂಡ್ಲಿಗಿಗೆ ಬಂದಿದ್ದ ಸಿಎಂ ಅವರಿಗೂ ತಾಲೂಕಿನ ಚಿತ್ರಣವನ್ನು ತೆರೆದಿಟ್ಟು ಮನವರಿಕೆ ಮಾಡಿ ಬರಪೀಡಿತ ತಾಲೂಕಾಗಿ ಮಾಡುವಂತೆ ಒತ್ತಾಯದ ಮನವಿ ಮಾಡಿದ್ದರು.

ಮೊದಲು ಬಾಗಶಃ, ಈಗ ತೀವ್ರ ಬರಪೀಡಿತ : ರಾಜ್ಯ ಸರ್ಕಾರ ಮೊದಲ ಬರಪೀಡಿತ ತಾಲೂಕಿನ ಪಟ್ಟಿಯಲ್ಲಿ ಅವಳಿ ತಾಲೂಕುಗಳಾದ ಕೂಡ್ಲಿಗಿ, ಕೊಟ್ಟೂರು ಹೆಸರು ಇಲ್ಲದೆ ಇದ್ದು ರೈತರ ಆಕ್ರೋಶದ ಒತ್ತಾಯಕ್ಕೆ ಮಣಿದ ಸರ್ಕಾರ ಎರಡನೇ ಬರ ಪೀಡಿತ ಪಟ್ಟಿಯಲ್ಲಿ ಬಾಗಶಃ ಬರಪೀಡಿತ ಎಂದು ಪಟ್ಟಿಯಲ್ಲಿ ನಮೂದಿಸಿ ಆದೇಶ ಹೊರಡಿಸಲಾಗಿತ್ತು ತದನಂತರ ಮೂರನೇ ಪಟ್ಟಿ ತಯಾರಿಕೆ ಸಂದರ್ಭದಲ್ಲಿ ಕೂಡ್ಲಿಗಿ ಶಾಸಕ ಡಾ ಶ್ರೀನಿವಾಸ ಮತ್ತೊಮ್ಮೆ ರಾಜ್ಯ ಸಿಎಂ, ಡಿಸಿಎಂ ಹಾಗೂ ಕೃಷಿ ಸಚಿವರು ಸೇರಿದಂತೆ ಸಂಬಂದಿಸಿದ ರಾಜ್ಯದ ಕಾರ್ಯದರ್ಶಿಗಳನ್ನು ಸಹ ಬೇಟಿ ಮಾಡಿ ಬೆನ್ನತ್ತಿ ಜನಜೀವನ ಕುರಿತಾದ ಮಾಹಿತಿ ನೀಡಿದಂತೆ ಗಮನಹರಿಸಿದ ಸರ್ಕಾರ ಕೂಡ್ಲಿಗಿ ತಾಲೂಕು ಹಾಗೂ ವಿಜಯನಗರ ಜಿಲ್ಲೆಯ ಜಿಲ್ಲಾ ಅಧಿಕಾರಿಗಳ ವರದಿ ಮಾಹಿತಿ ಸರ್ಕಾರಕ್ಕೆ ಸಲ್ಲಿಸಿದಂತೆ ಮೂರನೇ ಬಾರಿಗೆ ಕೂಡ್ಲಿಗಿ ಮತ್ತು ಕೊಟ್ಟೂರು ತಾಲೂಕುಗಳು ತೀವ್ರ ಬರ ಪೀಡಿತ ಸ್ಥಾನ ಪಡೆದುಕೊಂಡ ಪಟ್ಟಿ ಆದೇಶ ಮಂಗಳವಾರ ಹೊರಬಿದ್ದಿದ್ದು ರೈತರ ಮುಖದಲ್ಲಿ ಮಂದಹಾಸ ಕಂಡಿದೆ.

ಪರಿಹಾರ ಸಿಗುವ ನಂಬಿಕೆ : ತೀವ್ರ ಬರದ ತಾಲೂಕು ಘೋಷಣೆಯಿಂದ ರೈತರಲ್ಲಿ ತುಸು ನೆಮ್ಮದಿ ನಗೆ ಕಂಡಿದೆ ಮಳೆ ಇಲ್ಲದೆ ಬೆಳೆದ ಬೆಳೆ ಕೈಗೆ ಸಿಗದೇ ಕಂಗಲಾದ ರೈತನಿಗೆ ಬರಪೀಡಿತ ಪಟ್ಟಿಯಲ್ಲಿ ತಾಲೂಕಿನ ಹೆಸರು ಕಂಡ ರೈತರು ನಷ್ಟದ ಪರಿಹಾರ ಸಿಗುವ ನಂಬಿಕೆಯಲ್ಲಿದ್ದಾರೆ.